ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 · ಸಂಚಿಕೆ 52 · ಡಿಸೆಂಬರ್ 27, 1981 · ಬೆಲೆ : 60 ಪೈಸೆ

ಐ.ಎಂ.ಎಫ್. ಸಾಲಕ್ಕೆ ಧಿಕ್ಕಾರ

ಸಂಪಾದಕೀಯ

ದೇಶಕ್ಕೆ ಸ್ವಾತಂತ್ರ್ಯ ದೊರೆತು 34 ವರ್ಷಗಳ ನಂತರ ಈಗ ಆ ಸ್ವಾತಂತ್ರ್ಯಕ್ಕೆ ಹೊಸ ಗಂಡಾಂತರ ಬಂದಿದೆ. ಇಂದಿರಾ ಕಾಂಗ್ರೆಸ್ ಪಕ್ಷ ರೂ. 5,000 ಕೋಟಿಯ ಸಾಲವನ್ನು ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ ಪಡೆಯುವ ಸಲುವಾಗಿ(?) ಆ ನಿಧಿಯ ಆಡಳಿತೆಗಾರರು ಹಾಕಿರುವ ಎಲ್ಲ ಶರತ್ತುಗಳಿಗೂ ಭಾರತ ಸರಕಾರ ಒಪ್ಪಿಕೊಂಡು ದೇಶದ ಆರ್ಥಿಕ ಬೆಳವಣಿಗೆಯ ಸೂತ್ರವನ್ನೆಲ್ಲಾ ಅವರ ನಿಯಂತ್ರಣಕ್ಕೊಪ್ಪಿಸಿದೆ. ಅವರ ಆದೇಶದಂತೆ ನಾವು ನಡೆಯಬೇಕಾಗಿದೆ. ಇದು ನಾಚಿಕೆಗೇಡು.

ವಿಶ್ವಬ್ಯಾಂಕ್ ಮತ್ತು ಅಂತರಾಷ್ಟ್ರೀಯ ಹಣಕಾಸಿನ ನಿಧಿಗಳಿಂದ ಸಾಲ ಪಡೆಯುವುದೆಂದರೆ ಸುಲಭವೇನಲ್ಲ. ಅವರು ಹಾಕುವ ಶರತ್ತುಗಳನ್ನೆಲ್ಲಾ ಒಪ್ಪಬೇಕು. ಅವು ಯಾವುವು? ರೈಲ್ವೆ ಸಾಗಾಣಿಕೆ ದರಗಳನ್ನು ಹೆಚ್ಚಿಸಬೇಕು (ಈಗಾಗಲೇ ಸರಕಾರ ಅದನ್ನು ಮಾಡಿದೆ); ರಾಸಾಯನಿಕ ಗೊಬ್ಬರಗಳ ಸಬ್ಸಿಡಿ ರದ್ದು ಮಾಡಬೇಕು; ಆಹಾರಧಾನ್ಯಗಳ ಸಬ್ಸಿಡಿ ಹೋಗಬೇಕು; ಜನರ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಬೇಕು; ವಿದೇಶಗಳಿಂದ ಆಮದು ಸಡಿಲಗೊಳಿಸಬೇಕು; ಸಾರ್ವಜನಿಕ ಕ್ಷೇತ್ರವನ್ನು ಕುಂಠಿತಗೊಳಿಸಬೇಕು; ಖಾಸಗಿ ಗುತ್ತೇದಾರಿಗಳಿಗೆ ಅಧಿಕ ಸೌಲಭ್ಯ; ಆರ್ಥಿಕ ಯೋಜನೆಯನ್ನು ನಿಧಿಯ ಪ್ರತಿನಿಧಿಗಳ ಒಪ್ಪಿಗೆಗನುಸಾರವಾಗಿ ರೂಪಿಸಬೇಕು; ಈ ಸಾಲ ಮರುಪಾವತಿಯಾಗುವ ತನಕವೂ ದೇಶದ ಆರ್ಥಿಕ ಧೋರಣೆಗಳ ಮೇಲೆ ಅವರ ನಿಯಂತ್ರಣವಿರುವುದಲ್ಲದೆ ಅಲ್ಲಿಯವರೆಗೆ ಭಾರತ ಸರಕಾರ ಇತರರಿಂದ ಬೇರೆ ಸಾಲ ಪಡೆಯುವುದನ್ನು ಪ್ರತಿಬಂಧಿಸಲಾಗಿದೆ. ಸರಕಾರ ಮಾಡಿದ ಒಪ್ಪಂದದಲ್ಲಿ ಇವೆಲ್ಲ ಅಡಗಿರುವುದು ಎಲ್ಲರಿಗೂ ತಿಳಿದಿದ್ದರೂ, ಇದರಿಂದ ದೇಶದ ಗೌರವಕ್ಕೆ ಯಾವ ಧಕ್ಕೆಯೂ ಇಲ್ಲವೆಂದು ಪ್ರಧಾನಿಯವರು ಸಾರಿದ್ದಾರೆ. ಐ.ಎಂ.ಎಫ್. ನಿಧಿಯ ಆಡಳಿತ ಮಂಡಳಿಯ ಸದಸ್ಯರೊಬ್ಬರು ಸರಕಾರ ಒಪ್ಪಿಕೊಂಡ ಕರಾರುಗಳು ಅಪಾಯಕಾರಿಯಾಗಿವೆಯೆಂದು ಅರಿತು ಅದನ್ನು ಸಾರ್ವಜನಿಕರೂ ತಿಳಿಯುವುದಗತ್ಯವೆಂದು ಬಹಿರಂಗಪಡಿಸಿರುವಾಗ ಸರಕಾರದ ಹೇಳಿಕೆಗಳಿಗೆ ಅರ್ಥವಿಲ್ಲವೆನ್ನಬೇಕಾಗಿದೆ.

ಈ ಸಾಲ ಪಡೆಯುವುದನ್ನು ಎಲ್ಲ ವಿರೋಧ ಪಕ್ಷಗಳೂ ಒಕ್ಕೊರಲಿನಿಂದ ಖಂಡಿಸಿರುವುದು ಸ್ವಾಗತಾರ್ಹ. ಈ ಸಾಲದ ಅವಶ್ಯಕತೆಯೇ ಇಲ್ಲವೆಂದೂ, ಈ ಹಣವನ್ನು ಬೇರೆ ರೀತಿಯಲ್ಲಿ ಪಡೆಯಲು ಸಾಧ್ಯವೆಂಬುದೂ

(ಕಡೇ ಪುಟ ನೋಡಿ)

ಜನವರಿ 19ರ ಮುಷ್ಕರಕ್ಕೆ

ವಿರೋಧಿ ಪಕ್ಷಗಳ ಬೆಂಬಲ

ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿರುವ ವಿರೋಧಿ ಪಕ್ಷಗಳ ನಾಯಕರು ಸಭೆಸೇರಿ ಜನವರಿ 19, 1982 ರಂದು ನಡೆಯಲಿರುವ ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ಸೂಚಿಸಿದ್ದಾರೆ. ಈ ಕುರಿತು ವಿರೋಧಿ ಪಕ್ಷಗಳ ನಾಯಕರು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ. ಹೇಳಿಕೆಯ ಪೂರ್ತಿ ಪಾಠ ಇಂತಿದೆ:

"ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನೆದುರಿಸಿ ಮತ್ತು ಅಗತ್ಯ ಸೇವಾ ಕಾನೂನನ್ನು ಧಿಕ್ಕರಿಸಿ ರಾಷ್ಟ್ರೀಯ ಆಂದೋಲನ ಸಮಿತಿಯ ನೇತೃತ್ವದಲ್ಲಿ ಭಾರತದ ಕಾರ್ಮಿಕವರ್ಗ ಬೃಹತ್ ಮತಪ್ರದರ್ಶನ ನಡೆಸಿದ್ದನ್ನು ನಾವು ಅಭಿನಂದಿಸುತ್ತೇವೆ."

"ರೈತಾಪಿ ಜನತೆಯು ಬೆಳೆದ ಬೆಳೆಗಳಿಗೆ ಯೋಗ್ಯಬೆಲೆ ಕೊಡಬೇಕೆಂದೂ, ಕೃಷಿಕಾರ್ಮಿಕರಿಗೆ ಸೂಕ್ತ ವೇತನ ನೀಡಬೇಕೆಂದೂ, ಜನಸಾಮಾನ್ಯರಿಗೆ ಯೋಗ್ಯಬೆಲೆಯಲ್ಲಿ ಜೀವನಾವಶ್ಯಕ ಸಾಮಗ್ರಿಗಳನ್ನು ವಿತರಣೆ ಮಾಡಬೇಕೆಂಬ ಬೇಡಿಕೆಗಳನ್ನು ಮುಂದಿಸಿದ್ದಕ್ಕಾಗಿ ನಾವು ಕಾರ್ಮಿಕವರ್ಗವನ್ನು ಅಭಿನಂದಿಸುತ್ತೇವೆ."

"ಈ ಹೋರಾಟದ ಮುಂದುವರಿಕೆಯಾಗಿ ರಾಷ್ಟ್ರೀಯ ಆಂದೋಲನ ಸಮಿತಿಯು ಕೈಗಾರಿಕೆಯ ಕ್ಷೇತ್ರದಲ್ಲಿ ಅಖಿಲಭಾರತ ಸಾರ್ವತ್ರಿಕ ಮುಷ್ಕರಕ್ಕೆ ಜನವರಿ 19ರಂದು ಕರೆಕೊಟ್ಟಿರುವುದನ್ನು ಬೆಂಬಲಿಸುವುದಲ್ಲದೇ ಈ ಮುಷ್ಕರವನ್ನು ಬೆಂಬಲಿಸಬೇಕೆಂದು ಎಲ್ಲ ಜನತೆಯನ್ನು ವಿನಂತಿಸುತ್ತೇವೆ."

ಈ ಹೇಳಿಕೆಗೆ ಲೋಕಸಭೆಯ ಎ. ನೀಲಲೋಹಿತದಾಸನ್ ನಾಡಾರ್ (ಡಿ.ಎಸ್.ಪಿ.), ತ್ರಿದಿಬ್ ಚೌಧರಿ (ಆರ್. ಎಸ್. ಪಿ.), ಹರಿಕೇಶ್ ಬಹಾದ್ದೂರ್ (ಡಿ. ಎಸ್. ಪಿ.), ಚಿತ್‌ಬಸ್ (ಎಫ್. ಬಿ.) ಸಮರ

(ಕಡೇ ಪುಟ ನೋಡಿ)

ಪೋಲೆಂಡಿನಲ್ಲಿ ಗಂಭೀರ ಹೋರಾಟ

ರಾಷ್ಟ್ರೀಯ ಮುಕ್ತಿಯ ಸೈನಿಕ ಮಂಡಳಿಯನ್ನು ರಚಿಸಿ ರಕ್ಷಣಾದಳಗಳ ಮುಂದಾಳುಗಳ ಕೈಗಳಲ್ಲಿ ಸಂಪೂರ್ಣ ಅಧಿಕಾರವನ್ನು ಕೊಡುವ ಮೂಲಕ ಮಾನವತೆಯ ವೈರಿ ಸಾಮ್ರಾಜ್ಯಶಾಹಿಗಳಿಂದ ಪೋಷಿಸಿ, ಪ್ರೋತ್ಸಾಹಿಸಲ್ಪಡುತ್ತಿರುವ ಕ್ರಾಂತಿ-ವಿರೋಧಿ ಶಕ್ತಿಗಳಿಂದ ಸಮಾಜವಾದಿ ಪ್ರಭುತ್ವವನ್ನು ರಕ್ಷಿಸಬೇಕೆನ್ನುವ ಪೋಲೀಶ್ ಯುನೈಟೆಡ್ ವರ್ಕರ್ಸ್ ಪಾರ್ಟಿಯು ದೃಢತೆಯನ್ನು ತೋರಿಸಿದೆ.

ಜಗತ್ತಿನಾದ್ಯಂತ ಪುರೋಗಾಮಿ ಶಕ್ತಿಗಳು, ಇಡೀ ಸಮಾಜವಾದಿ ಶಿಬಿರ ಮತ್ತು ಜಾಗತಿಕ ಕಮ್ಯುನಿಸ್ಟ್ ಚಳುವಳಿಗಳು ಸಮಾಜವಾದಿ ಸಾಧನೆಗಳ ಸ್ಥಾನದಲ್ಲಿ ಬಂಡವಾಳಶಾಹಿ ಪದ್ಧತಿ ಮತ್ತದರ ಶೋಷಣೆಯನ್ನು ಪುನಃ ಸ್ಥಾಪಿಸುವುದಕ್ಕಾಗಿ ಪ್ರತ್ಯಕ್ಷವಾಗಿ ತಯಾರಿ ನಡೆಸುತ್ತಿರುವ ಶಕ್ತಿಗಳಿಗೆ ಶರಣಾಗುವುದಿಲ್ಲವೆಂಬ ಈ ದೃಢತೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತವೆ. ಈ ಸವಾಲನ್ನು ಎದುರಿಸುವಲ್ಲಿ ಏನಾದರೂ ಬಲಹೀನತೆ ತೋರಿಸಿದ್ದರೆ, ಕೆಲವು ನಿಜವಾದ ಬೇಡಿಕೆಗಳಿಗಾಗಿ ನ್ಯಾಯಬದ್ಧವಾಗಿ ಪ್ರಜಾಸತ್ತಾತ್ಮಕವಾಗಿ ಹೋರಾಟ ನಡೆಸುತ್ತಿದ್ದಾರೆ ಎಂದು ಪರಿಗಣಿಸಿದ್ದರೆ, ವರ್ಗವೈರಿಗಾಗಿ ವಸ್ತುನಿಷ್ಠನಾಗಿ ದ್ರೋಹಬಗೆದಂತಾಗುತ್ತಿತ್ತು. ಪೋಲೆಂಡಿನಲ್ಲಿ ಪ್ರತಿಕ್ರಾಂತಿಕಾರಿಗಳ ಬ್ಲ್ಯಾಕ್‌ಮೇಲ್ ಮತ್ತು ಬಲಾತ್ಕಾರದಿಂದ ಮುಕ್ತಗೊಳಿಸುವ ನಿರ್ಣಾಯಕ ಯುದ್ಧವನ್ನು ಮಾಡಲು ಒಂದಾದ ಪಿ. ಯು.ಡಬ್ಲ್ಯು.ಪಿ ಯನ್ನು ನಾವು ಅಭಿನಂದಿಸುತ್ತೇವೆ.

ಸಮಾಜವಾದದ ವಿರುದ್ಧ ಕಾರ್ಮಿಕ ವರ್ಗದ ಪ್ರಭುತ್ವದ ವಿರುದ್ಧ ಒಂದು ಗಣನೀಯ ಟ್ರೇಡ್‌ಯೂನಿಯನ್ ಶಕ್ತಿಯು ವಿರೋಧ ಮಾಡುತ್ತಿರುವ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವಾದ ಗಂಭೀರ ತಪ್ಪುಗಳನ್ನು ಜ್ಞಾಪಕಕ್ಕೆ ತರುವ ಕಾಲ ಇದಲ್ಲ. ಸರಕಾರವನ್ನು ನಡೆಸುವುದರಲ್ಲೂ, ಕಾರ್ಮಿಕವರ್ಗದ ಪಕ್ಷವನ್ನು ನಡೆಸುವುದರಲ್ಲೂ ಲೆನಿನ್‌ರ ಕ್ರಮ ವಿಧಾನಗಳನ್ನು ಉಲ್ಲಂಘಿಸಿದಾಗ ಸಮಾಜವಾದಿ ಕ್ರಾಂತಿಯ ಶಕ್ತಿಸಾಮರ್ಥ್ಯ ಮತ್ತು ಭದ್ರತೆ ಎಷ್ಟು ಶಿಥಿಲವಾಗುವುದು ಎಂಬುದನ್ನು ಪೋಲೆಂಡ್‌ನ ಅನುಭವವು ತೋರಿಸಿಕೊಡುತ್ತದೆ. ಪಿ. ಯು. ಡಬ್ಲ್ಯು. ಪಿ. ತನ್ನ ತಪ್ಪುಗಳನ್ನು ಅರಿತುಕೊಂಡು ನಡೆದ ಅನಾಹುತವನ್ನು ಸರಿಪಡಿಸಿಕೊಳ್ಳಲು ಬೇಗನೆ ಕ್ರಮಗಳನ್ನು ಕೈಗೊಂಡಿತು; ಆದರೆ, ಸಮಾಜವಾದದ ಸಾಂಪ್ರದಾಯಿಕ ಪ್ರತಿನಿಧಿಗಳಿಂದಲೂ ಪ್ರೋತ್ಸಾಹಿಸಲ್ಪಟ್ಟ ಈ ವೈರಿ ಶಕ್ತಿಗಳು ಒಂದು ಹಿಂಸಾತ್ಮಕ ಘರ್ಷಣೆಗೆ ಸಿದ್ಧವಾದವು. ನಿಜವಾದ ಬೇಡಿಕೆಗಳನ್ನು ಉಪಯೋಗಿಸಿಕೊಂಡು ಚಳುವಳಿಯನ್ನು ಬಂಡವಾಳಶಾಹಿ ಪರ ದಿಕ್ಕಿನಲ್ಲಿ ಒಯ್ಯಲು ಸಾಮ್ರಾಜ್ಯಶಾಹಿಗಳೂ, ಪಾದ್ರಿಗಳೂ ಜೊತೆಯಾಗಿ ಪ್ರಯತ್ನಿಸಿದವು. ಆರಂಭದಲ್ಲಿ ಸೊಲಿಡಾರಿಟಿ ಟ್ರೇಡ್‌ಯೂನಿಯನ್‌ಗಳು ತಾವು ಕಾರ್ಮಿಕರ ತುರ್ತಿನ ಬೇಡಿಕೆಗಳನ್ನು ಮಾತ್ರ ಪ್ರತಿನಿಧೀಕರಿಸುತ್ತಿದ್ದೇವೆ ಎಂದೂ, ತಮಗೆ ಯಾವುದೇ ರೀತಿಯ ರಾಜಕೀಯ ಮಹತ್ವಾಕಾಂಕ್ಷೆಗಳು ಇಲ್ಲವೆಂದೂ, ತಾವು ಪೋಲೆಂಡಿನಲ್ಲಿ ಸಮಾಜವಾದೀ ಪದ್ಧತಿಗೆ ವಿರೋಧವಲ್ಲವೆಂದೂ ಹೇಳುತ್ತಿದ್ದವು. ಸರಕಾರವು ಅತೃಪ್ತಿಗೆ ನಿಜವಾದ ಕಾರಣವಿದೆ ಎಂದು ತಿಳಿದು, ಪರಿಸ್ಥಿತಿಯೊಡನೆ ಸಾವಧಾನವಾಗಿ ವ್ಯವಹರಿಸಿತು; ಹಲವು ಸವಲತ್ತುಗಳನ್ನು ಕೊಟ್ಟಿತು; ಹಲವಾರು ಬೇಡಿಕೆಗಳನ್ನು ಒಪ್ಪಿಕೊಂಡಿತು; ಕಾರ್ಮಿಕರ ಮಧ್ಯೆ ವಿಶ್ವಾಸವನ್ನು ಪುನಃ ಏರ್ಪಡಿಸುವ ಮತ್ತು ಪೋಲೆಂಡಿನ ಜನತೆ ಐಕ್ಯತೆಗುಂಟಾದ ಹಾನಿಯನ್ನು ಸರಿಪಡಿಸುವ ದೃಷ್ಟಿಯಿಂದ ಎಲ್ಲಾ ದಬ್ಬಾಳಿಕೆಯನ್ನು ತಡೆಹಿಡಿಯಿತು. ಜನತೆಯ ಹಿತಗಳಿಗೆ ಪೃಥವಾದ ನಿಷ್ಠೆಯುಳ್ಳಿರುವ ಮತ್ತು ಜನತೆಯ ಹಿತಗಳನ್ನು ರಕ್ಷಿಸಲು ಬದ್ಧವಾಗಿರುವ ಪಕ್ಷ ಮತ್ತು ಸರಕಾರವು ಮಾತ್ರ ಹಲವು ತಿಂಗಳುಗಳ ಕಾಲದಲ್ಲಿ ಅಷ್ಟೊಂದು ತಾಳ್ಮೆಯನ್ನು ತೋರಿಸಲು ಸಾಧ್ಯ.

ಆದರೆ ಸೊಲಿಡೇರಿಟಿ ಮುಂದಾಳುಗಳು ಸಮಾಜವಾದಿ ಪ್ರಭುತ್ವವನ್ನು ಕಿತ್ತುಹಾಕಲು ಹವಣಿಸುತ್ತಿದ್ದರು. ಕಾರ್ಮಿಕವರ್ಗದ ಮತ್ತು ಜನತೆಯ ಅತೃಪ್ತಿಯನ್ನು ದುರುಪಯೋಗಿಸಿಕೊಂಡು ಬಂಡವಾಳಶಾಹಿ-ಭೂಮಾಲಕ ವರ್ಗಗಳಿಗೆ ಒಪ್ಪಿಸಲು ಹುರಿಚಿಕೆ ಮಾಡುತ್ತಿದ್ದರು.

ಆದ್ದರಿಂದ ಅವರು ಯಾವುದೇ ಒಪ್ಪಂದಕ್ಕೆ ಬರಲಿಲ್ಲ. ಸರಕಾರವು ಕೊಡುತ್ತಾ ಬಂದ ಪ್ರತಿಯೊಂದು ಸವಲತ್ತು ಸಮಾಜವಾದದ ಶವಪೆಟ್ಟಿಗೆಯ ಮೇಲೆ ಹೊಡೆದ ಮೊಳೆ (ಆಣಿ) ಎಂದು ಅವರು ತಿಳಿದುಕೊಂಡರು. ಪ್ರತಿದಿನವು ಅವರ ಅಧಿಕಾರವಾಣಿ ಬೆಳೆಯುತ್ತಾ ಹೋಯಿತು.

ಪೋಲಿಶ್ ಸಮಾಜವನ್ನು ಕಾಲಿಂದ ಹತ್ತಿಕ್ಕಲು(?) ಮಾಡಲು ಅವರು ಉತ್ಪಾದನೆಯನ್ನು ಸಂಪೂರ್ಣವಾಗಿ ಶಿಥಿಲಗೊಳಿಸಲು ಹಂಚಿಕೆ ಹೂಡಿದರು. ಸಾರ್ವತ್ರಿಕ ಅಸ್ತವ್ಯಸ್ತ ಪರಿಸ್ಥಿತಿಯನ್ನುಂಟು ಮಾಡಿ, ಸರಕಾರ ಕ್ಕೂ ಪಕ್ಷಕ್ಕೂ ನಿಯಂತ್ರಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾಗಿದೆ ಎಂದು ಸೊಲಿಡೇರಿಟಿ ದೇಶದ್ರೋಹಿಗಳು ತಮ್ಮನ್ನು ತಾವು

(ಕಡೇ ಪುಟ ನೋಡಿ)

ಇಂದಿರಾ ಸಂಸತ್‌ನ್ನು ಕಡೆಗಣಿಸಿದ್ದಾರೆ

"ಸಂಸತ್ ಅಧಿವೇಶನ ನಡೆಯುತ್ತಿದ್ದಾಗಲೇ ರೇಲ್ವೆ ಮಂತ್ರಿಯು ರೇಲ್ವೆ ಪ್ರಯಾಣ-ಸಾಗಾಣಿಕೆಯ ದರವನ್ನು ಶೇ. 10 ರಿಂದ ಶೇ. 15 ರಷ್ಟು ಹೆಚ್ಚಿಸಿದ್ದಾರೆ. ದರ ಹೆಚ್ಚಿಸುವ ಮೊದಲು ಸಂಸತ್‌ನ ಮುಂದೆ ಮಂಡಿಸದೇ ಈ ಕ್ರಮಕೈಕೊಂಡಿದ್ದನ್ನು ಸ್ವತಃ ಲೋಕಸಭೆಯ ಸ್ಪೀಕರ್ ಆಕ್ಷೇಪವೆತ್ತಿದ್ದಾರೆ. ಈ ಹಿಂದೆ ಸಂಸತ್‌ನ ಮುಂದೆ ಮಂಡಿಸದೇ ಪೆಟ್ರೋಲ್-ಸೀಮೆ ಎಣ್ಣೆ ಮುಂತಾದವುಗಳ ದರ ಹೆಚ್ಚಿಸಿದ್ದರು. ಆಳುವ ಸರಕಾರ ಸಂಸತ್‌ನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸುತ್ತಿದ್ದಾರೆ" ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರೂ ಸಂಸತ್ ಸದಸ್ಯರೂ ಆದ ಕಾಂ. ಇ. ಬಾಲಾನಂದನ್ ಆಪಾದಿಸಿದರು.

20-12-81ರಂದು ಬೆಂಗಳೂರಿನಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಕಾಂ. ಬಾಲಾನಂದನ್ ಮಾತನಾಡುತ್ತಿದ್ದರು.

"ಭಾರತ ಸರಕಾರದ ಈಗಿನ ನೀತಿ ದೇಶವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದೆ. ಸುಮಾರು 5000 ಕೋಟಿ ರೂ.ಗೂ ಮಿಕ್ಕಿ ಹಣವನ್ನು ಐ.ಎಂ.ಎಫ್.ನಿಂದ ಸಾಲ ಪಡೆದು ದೇಶದ ಸ್ವಾತಂತ್ರ್ಯ ಮತ್ತು ಗೌರವವನ್ನು ಒತ್ತೆ ಇಡಲಾಗಿದೆ. ಕೇಂದ್ರ ವಿತ್ತ ಮಂತ್ರಿ ಒಪ್ಪಿಕೊಂಡಿರುವ ಷರತ್‌ಗಳ ಕುರಿತು ದೇಶದ ಎಲ್ಲ ಪತ್ರಿಕೆಗಳೂ ಕಳವಳ ವ್ಯಕ್ತಪಡಿಸಿವೆ. ಐ.ಎಂ.ಎಫ್. ಸಾಲದ ವ್ಯವಹಾರದಲ್ಲೂ ಸಂಸತ್‌ನ್ನು ಕಡೆಗಣಿಸಿದ್ದಷ್ಟೇ ಅಲ್ಲದೆ ಒಪ್ಪಂದದ ವಿವರವನ್ನೂ ಸಂಸತ್‌ಗೆ ಒದಗಿಸಿಲ್ಲ" ಎಂದು ಕಾಂ. ಬಾಲಾನಂದನ್ ತಿಳಿಸಿದರು.

ಜನತೆಯ ಸ್ವಾತಂತ್ರ್ಯದ ಮೇಲೂ ಇಂದಿರಾ ಸರಕಾರ ಅವ್ಯಾಹತ ಹಲ್ಲೆ ನಡೆಸಿದೆ ಎಂದು ಆರೋಪಿಸಿದ ಕಾಂ. ಬಾಲಾನಂದನ್‌ರು ಅಗತ್ಯಸೇವಾ ಕಾನೂನು ಮತ್ತು ರಾಷ್ಟ್ರೀಯ ಭದ್ರತಾ ಕಾನೂನು ಮುಂತಾದವುಗಳನ್ನು ಉದಾಹರಿಸಿದರು.

"ಸರಕಾರದ ನೀತಿಯಿಂದಾಗಿ ಬೆಲೆ ಏರಿಕೆ ವಿಪರೀತ ಹೆಚ್ಚಿ ಜನತೆ ಅಪಾರ ಸಂಕಷ್ಟಕ್ಕೀಡಾಗಿದೆ. ರೈತಾಪಿ ವರ್ಗಕ್ಕೆ ಅವರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ದೊರಕುತ್ತಿಲ್ಲ" ಎಂದು ತಿಳಿಸಿದ ಕಾಂ. ಬಾಲಾನಂದನ್‌ರು ಐ.ಎಂ.ಎಫ್. ನೊಂದಿಗಾದ ಒಪ್ಪಂದದನ್ವಯ ಆಹಾರಸಾಮಾಗ್ರಿ ಮತ್ತು ಗೊಬ್ಬರ ರಿಯಾಯಿತಿ ಇಲ್ಲವಾಗಿ ಬಡಜನತೆ ಇನ್ನೂ ಸಂಕಷ್ಟದಲ್ಲಿ ಸಿಲುಕಲಿದೆ" ಎಂದರು.

ಸರಕಾರದ ನೀತಿಯನ್ನು ಪ್ರತಿಭಟಿಸಿ ನ. 23ರಂದು ದೆಹಲಿಯಲ್ಲಿ ನಡೆದ ಚಾರಿತ್ರಿಕ ಮಹಪ್ರದರ್ಶನವನ್ನು ಉಲ್ಲೇಖಿಸಿದ ಕಾಂ. ಬಾಲಾನಂದನ್‌ರು ಸರಕಾರದ ದಿವಾಳಿಕೋರ ನೀತಿಯನ್ನು ಪ್ರತಿಭಟಿಸಿ ಸಿಡಿದೇಳುವುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ ಎಂದರು.

ಭಾರತದ ಕಾರ್ಮಿಕ ವರ್ಗ ಹಲವು ಮಹತ್ವದ ಬೇಡಿಕೆಗಳನ್ನು ಮುಂದಿಟ್ಟು 1982ರ ಜನವರಿ 19ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆಕೊಟ್ಟಿರುವುದರ ಕುರಿತು ಪತ್ರಕರ್ತರ ಗಮನ ಸೆಳೆದ ಕಾಂ. ಬಾಲಾನಂದನ್‌ರು ಜ. 19ರಂದು ಮುಷ್ಕರಕ್ಕಿಳಿಯಲಿರುವ ಕಾರ್ಮಿಕ ವರ್ಗ ಕೇವಲ ತಮ್ಮ ಬೇಡಿಕೆಗಳಿಗೋಸ್ಕರ ಮಾತ್ರವಲ್ಲ ಜನಸಾಮಾನ್ಯರ ಬೇಡಿಕೆಗಳಿಗೋಸ್ಕರವೂ ಹೋರಾಟಕ್ಕಿಳಿದಿದ್ದು ಈ ಮುಷ್ಕರವನ್ನು ಬೆಂಬಲಿಸುವಂತೆ ಕಾಂ. ಬಾಲಾನಂದನ್ ವಿನಂತಿಸಿದರು.

–ಬಾಲಾನಂದನ್

ಲಗ್ಗೇಜ್ ದರ ಏರಿಕೆಗೆ ಪ್ರತಿಭಟನೆ

2 ತಿಂಗಳ ಹಿಂದೆ ಬೆಂಗಳೂರು ರಸ್ತೆ ಸಾರಿಗೆಯಲ್ಲಿ ಹಳ್ಳಿಪ್ರದೇಶದಿಂದ ನಗರಕ್ಕೆ ತರುತ್ತಿದ್ದ ದಿನಸಿ ಪದಾರ್ಥಗಳ ಬೆಲೆ ಮೂಟೆಗೆ 3ರೂ. ಮತ್ತು ತರಕಾರಿ ಮೂಕ್ರಿ (ಬುಟ್ಟಿ) ಒಂದಕ್ಕೆ 50 ಪೈಸೆಯಿಂದ 75ಪೈಸೆ ಇತ್ತು. ಈಗ ಈ ಲಗ್ಗೇಜ್ ದರವನ್ನು ದಿಢೀರ್ ಆಗಿ ಏರಿಸಲಾಗಿದೆ. ತರಕಾರಿ ಮೂಕ್ರಿ (ಬುಟ್ಟಿ) ಒಂದಕ್ಕೆ ಲಗ್ಗೇಜ್ ದರ ಈ 2ರೂ. ನಿಂದ 4ರೂ. ವರೆಗೆ ಆಗಿದೆ. ಈ ಕುರಿತು ಕಂಡೆಕ್ಟರುಗಳನ್ನು ಕೇಳಿದರೆ "ಡಿ.ಜಿ.ಎಂ. ನವರನ್ನು ಕೇಳಿ" ಎನ್ನುತ್ತಿರುತ್ತಿದ್ದಾರಲ್ಲದೇ ಮಾರ್ಗ ಮಧ್ಯದಲ್ಲೇ ಲಗ್ಗೇಜ್ ಇಳಿಸಿಟ್ಟು ಹೋಗುತ್ತಿದ್ದಾರೆ.

ಬಿ.ಟಿ.ಎಸ್.ನಲ್ಲಿ ಓಡಾಡುತ್ತಿರುವ ಬೆಂಗಳೂರಿನ ಅಕ್ಕಪಕ್ಕದ ಹಳ್ಳಿಗಳಿಗೆ ವಿಪರೀತ ತೊಂದರೆಯಾಗಿರುವುದನ್ನು ಗಮನಿಸಿ, ಲಗ್ಗೇಜ್ ದರವನ್ನು ದಿಢೀರ್ ಏರಿಸಿರುವ ಕ್ರಮವನ್ನು ಬೆಂಗಳೂರು ಜಿಲ್ಲಾ ರೈತಸಂಘದ ಪ್ರಧಾನಕಾರ್ಯದರ್ಶಿ ಕಾಂ. ಲಕ್ಕಣ್ಣ ಹೇಳಿಕೆಯೊಂದನ್ನು ಹೊರಡಿಸಿ ಖಂಡಿಸಿದ್ದಾರೆ.

ಸಾರಿಗೆ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ತೀವ್ರ ಪರಿಶೀಲನೆ ಮಾಡಿ ರೈತರಿಗೆ ಆಗುತ್ತಿರುವ ಅನ್ಯಾಯ ತಡೆಗಟ್ಟಬೇಕೆಂದು ಬೆಂಗಳೂರು ಜಿಲ್ಲಾ ರೈತಸಂಘವು ಒತ್ತಾಯಿಸಿದೆ. ಇಲ್ಲವಾದಲ್ಲಿ ಬಿ.ಟಿ.ಎಸ್. ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಹೂಡುವುದಾಗಿ ಎಚ್ಚರಿಸಿದೆ. ○

ಕಾಂ. ಧನಸಿಂಗರ ನಿಧನ

ಕೆ.ಜಿ.ಎಫ್.ನ ಕಾರ್ಮಿಕ ಮುಂದಾಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತ ಕಾಂ. ಎಸ್. ಧನಸಿಂಗ ಅವರು 12-12-81ರಂದು ಕೆ.ಜಿ.ಎಫ್.ನಲ್ಲಿ ನಿಧನರಾಗಿದ್ದಾರೆ.

ಕಾಂ. ಧನಸಿಂಗರು 1939ರಲ್ಲಿ ಕೆ.ಜಿ.ಎಫ್.ನ ಗಣಿಗಳಲ್ಲಿ ಕಾರ್ಮಿಕನಾಗಿ ಸೇರಿ ಕೋಲಾರ ಗೋಲ್ಡ್ ಮೈನ್ ಕಾರ್ಮಿಕರ ಸಂಘಟನೆಯಲ್ಲಿ ಅಗ್ರಪಾತ್ರ ವಹಿಸಿದರು. ಕಾಂ. ಧನಸಿಂಗರು ಮೊದಲು ಕಾಂಗ್ರೆಸ್‌ನಲ್ಲಿ ಸಕ್ರಿಯರಾಗಿದ್ದರು. ಶ್ರೀ ಪಿ. ಕೆ. ಆರ್. ಶರ್ಮರ ನೇತೃತ್ವದಲ್ಲಿ ಗಣಿ ಕೆಲಸಗಾರರನ್ನು ಸಂಘಟಿಸಿ ಜಾನ್ ಟೇಲರ್ ಮತ್ತಿತರ ಗಣಿ ಮಾಲೀಕರಿಂದ ಮಾನ್ಯತೆ ಪಡೆಯುವಲ್ಲಿ ಸಫಲರಾದರು. ನಂತರ ಗಣಿ ಕೆಲಸಗಾರರ ಮುಂಚೂಣಿಯ ವಿಭಾಗದೊಂದಿಗೆ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ ಧನಸಿಂಗರು "ಮೈಸೂರು ಮೈನ್ಸ್ ಲೇಬರ್ ಅಸೋಸಿಯೇಷನ್"ಗೆ ಕಮ್ಯುನಿಸ್ಟರು ಚುನಾಯಿತರಾಗುವಂತೆ ಶ್ರಮಿಸಿದರು. ಅನಂತರ 1944ರಲ್ಲಿ ಕೆ.ಜಿ.ಎಫ್. ಘಟಕವನ್ನು (ಕಮ್ಯುನಿಸ್ಟ್ ಪಕ್ಷದ) ಪ್ರಾರಂಭಿಸಿದರು. ಈ ಕಾರ್ಯದಲ್ಲಿ ಕಾಂ. ಧನಸಿಂಗರಿಗೆ ಪಿ. ಬಿ. ಸದಸ್ಯ ಕಾಂ. ಪಿ. ರಾಮಮೂರ್ತಿ ಸಹಕರಿಸಿದ್ದರು.

ಮುಂದೆ ಧನಸಿಂಗರು ಪಕ್ಷದ ಚಟುವಟಿಕೆಗಳಲ್ಲಿ ತುಂಬ ಸಕ್ರಿಯರಾಗಿದ್ದರು. 1948ರಲ್ಲಿ ಅವರನ್ನು ಬಂಧಿಸಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಡಲಾಗಿತ್ತು. ಬಿಡುಗಡೆಯಾದ ನಂತರ ಅವರನ್ನು ಎರಡು ವರ್ಷ ಅವಧಿಯವರೆಗೆ ಕೆ.ಜಿ.ಎಫ್. ಪ್ರದೇಶದಿಂದ ಗಡಿಪಾರು ಮಾಡಲಾಗಿತ್ತು. ಗಡಿಪಾರು ಅವಧಿ ಮುಗಿದ ನಂತರ ಕೆ.ಜಿ.ಎಫ್.ಗೆ ಮರಳಿದ ಧನಸಿಂಗರು ಪಾತ್ರ ಕಾರ್ಮಿಕರಂಗದಲ್ಲಿ ಸಕ್ರಿಯರಾಗಿ ತಮ್ಮ ಜೀವನದ ಕೊನೆಯವರೆಗೂ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್‌ನ ಸಹಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 11ನೇ ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ ಜರಗುತ್ತಿದ್ದಾಗಲೇ ಕಾಂ. ಧನಸಿಂಗರು ಕೆ.ಜಿ.ಎಫ್.ನಲ್ಲಿ ಹೃದಯಾಘಾತದಿಂದ ನಿಧನರಾದ ದುಃಖಕರ ವಾರ್ತೆ ಬಂದಿತ್ತು. ಸಮ್ಮೇಳನದಲ್ಲಿ ಕಾಂ. ಧನಸಿಂಗರ ನಿಧನದ ಕುರಿತು ಸಂತಾಪ ವ್ಯಕ್ತಪಡಿಸಲಾಯಿತು.

ತಮ್ಮ ಜೀವನದುದ್ದಕ್ಕೂ ಪಕ್ಷಕ್ಕಾಗಿ ದುಡಿದ ಕಾಂ. ಧನಸಿಂಗರ ನಿಧನಕ್ಕೆ ಐಕ್ಯರಂಗ ತೀವ್ರ ದುಃಖ ವ್ಯಕ್ತಪಡಿಸುತ್ತದೆ.

ಡಿ.ವೈ.ಎಫ್.ಐ. ರಾಜ್ಯಸಮಿತಿಯ ತೀರ್ಮಾನ

ಜನವರಿ ೧೫ರಂದು ಧರಣಿ ಸತ್ಯಾಗ್ರಹ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.)ನ ರಾಜ್ಯಸಮಿತಿಯ ಸಭೆಯು ಮಂಗಳೂರಿನಲ್ಲಿ 15-12-81 ರಂದು ಸಭೆ ಸೇರಿ ಜನವರಿ 15ರಂದು ರಾಜ್ಯದಾದ್ಯಂತ ಜಿಲ್ಲಾ ಕಚೇರಿಗಳೆದುರು ಧರಣಿ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದೆ.

ಸ್ಟೈಫಂಡರಿ ಪದವೀಧರರನ್ನು ಕೆಲಸದಲ್ಲಿ ಖಾಯಂಗೊಳಿಸುವಂತೆ, ನಿರುದ್ಯೋಗಿ ಯುವಜನತೆಗೆ ನಿರುದ್ಯೋಗ ಭತ್ತೆ ನೀಡಲು ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಶೀಘ್ರವಾಗಿ ಪ್ರಾರಂಭಿಸುವಂತೆ ಸರಕಾರವನ್ನು ಒತ್ತಾಯಿಸಿ ಈ ಧರಣಿ ಸತ್ಯಾಗ್ರಹ ನಡೆಯಲಿದೆ.

1981ರ ನವೆಂಬರ್ ಒಂದರೊಳಗೆ ಸ್ಟೈಫಂಡರಿ ಪದವೀಧರರನ್ನು ಖಾಯಂಗೊಳಿಸುವ ಸರಕಾರದ ಪೊಳ್ಳು ಆಶ್ವಾಸನೆಯನ್ನು ರಾಜ್ಯಸಮಿತಿಯು ತೀವ್ರವಾಗಿ ಖಂಡಿಸಿ ಆಶ್ವಾಸನೆಯನ್ನು ಕಾರ್ಯಗತ ಮಾಡುವಂತೆ ಸರಕಾರವನ್ನು ಸಭೆ ಒತ್ತಾಯಿಸಿದೆ.

ಸ್ಟೈಫಂಡರಿ ಪದವೀಧರರು ಸರಕಾರದ ಹಾಗೂ ಸರಕಾರದ ಬಾಲಬಡುಕರ ಬೋಗಸ್ ಆಶ್ವಾಸನೆಗಳನ್ನು ನಂಬದೇ ಸಂಘಟಿತ ಹೋರಾಟ ನಡೆಸಲು ಮುಂದೆ ಬರಬೇಕೆಂದು ಡಿ.ವೈ.ಎಫ್.ಐ. ರಾಜ್ಯಸಮಿತಿ ವಿನಂತಿಸಿದೆ.

1982 ಜನವರಿ 15ರಂದು ಜಿಲ್ಲಾ ಕಚೇರಿಗಳೆದುರು ನಡೆಯಲಿರುವ ಧರಣಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸುವಂತೆ, ಸಾಧ್ಯವಿರುವೆಡೆಯಲ್ಲಿ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಲು ರಾಜ್ಯಸಮಿತಿ ಸಭೆ ವಿನಂತಿಸಿದೆ.

ಜನವರಿ 19ರಂದು ಇಂದಿರಾ ಸರಕಾರದ ಕಾರ್ಮಿಕವಿರೋಧಿ ನೀತಿಯನ್ನು ಪ್ರತಿಭಟಿಸಿ ಅಖಿಲಭಾರತದಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ ಸಭೆಯು ಈ ಮುಷ್ಕರ ಯಶಸ್ವಿಗೊಳಿಸುವಲ್ಲಿ ಸಹಕರಿಸುವಂತೆ ತನ್ನೆಲ್ಲಾ ಘಟಕಗಳಿಗೆ ಕರೆ ನೀಡಿದೆ.

●

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಎಸ್. ಎಫ್. ಐ. ಬೀದರ ಘಟಕದ ಸಭೆ

6–12-81ರಂದು ಎಸ್. ಎಫ್. ಐ.ನ ಬೀದರ ಜಿಲ್ಲಾ ಘಟಕದ ಸಭೆಯು ಮಹಮ್ಮದ್ ಗೌಸೋದ್ದಿನ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಭೆಯಲ್ಲಿ ವಿದ್ಯಾರ್ಥಿ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಯಿತು. ಈ ಚರ್ಚೆಯಲ್ಲಿ ಸಿದ್ರಾಮ ವಾಘಮೋರೆ ಮತ್ತು ವೀರಶೆಟ್ಟಿ ಬಾವಗಿ ಇನ್ನಿತರರು ಭಾಗವಹಿಸಿದ್ದರು.

ಸಭೆಯನ್ನುದ್ದೇಶಿಸಿ ಡಿ.ವೈ.ಎಫ್.ಐ.ನ ಸಂಗಶೆಟ್ಟಿ ಪಾಟೀಲ ಮಾತನಾಡಿ ವಿದ್ಯಾರ್ಥಿಗಳ ಹೋರಾಟಕ್ಕೆ ಡಿ.ವೈ.ಎಫ್.ಐ.ನ ಬೆಂಬಲ ವ್ಯಕ್ತಪಡಿಸಿದರು.

ಕೊನೆಯಲ್ಲಿ ಇತ್ತೀಚಿಗೆ ನಡೆದ ದೆಹಲಿಯ ಕುತುಬ್‌ಮಿನಾರ್ ದುರಂತದಲ್ಲಿ ಮೃತಪಟ್ಟವರ ಬಗ್ಗೆ ಸಂತಾಪ ವ್ಯಕ್ತಪಡಿಸಲಾಯಿತು.

●

ಕರ್ನಾಟಕ ರಾಜ್ಯದಲ್ಲಿ

ಅಲ್ಲಿ ನೋಡು ಕೆಂಪು ಸೇನೆ ಬರುತಿದೆ

-ಎನ್ಕೆ

ಅಲ್ಲಿ ನೋಡು ಕೆಂಪು ಸೇನೆ ಬರುತಿದೆ-ಉದ್ಗಾರ ತೆಗೆದವರು ಔಷಧ ಅಂಗಡಿಯ ಮಾಲಕರು - ಮಂಗಳೂರಿನ ಹಂಪನಕಟ್ಟೆಯಲ್ಲಿ. ಸೋಮವಾರ ಡಿಸೆಂಬರ್ 14ರಂದು ಸಂಜೆ 5 ಗಂಟೆಗೆ ಕೆಂಪು ಸಮವಸ್ತ್ರಧಾರಿಗಳಾದ 2000 ರೈತ-ಕಾರ್ಮಿಕ ಯುವಕರು ಲೆಫ್ಟ್-ರೈಟ್ ಸಂಜ್ಞೆಗೆ ತಾಳ ಹಾಕಿಕೊಂಡು ಲೈಟ್ ಹೌಸ್ ಗುಡ್ಡೆಯಿಂದ ಕೆಳಗಿಳಿಯುತ್ತಿದ್ದಾರೆ. ಕಮಾಂಡರ್ ಜನಾರ್ಧನ ನಾಯ್ಕ್. ಅವರ ಬೆನ್ನಿಗೆ ಮೂಕರಂತೆ 2000 ಕೆಂಪು ಸಮವಸ್ತ್ರಧಾರಿಗಳು, ಎಂಥ ರಮ್ಯ ದೃಶ್ಯ, ಎಂಥ ಶಿಸ್ತು, ಎಂಥ ಗಂಭೀರತೆ, ತಾಳಕ್ಕೆ ತಕ್ಕಂತೆ ಎಂಥ ಹೆಜ್ಜೆ.

ಹಿಟ್ಲರನ ಸೈನಿಕರನ್ನು ಸೋಲಿಸಲು ಹೊರಟ ರಷ್ಯದ ಕ್ರಾಂತಿಕಾರಿ ಕೆಂಪು ಸೇನೆ ಇದಲ್ಲ. ಝೆಕೊಸ್ಲೊವಾಕಿಯಾದಲ್ಲಿ ಬಂಡವಾಳಶಾಹಿಗಳ ಮರು ಕ್ರಾಂತಿಯನ್ನು ಮಣ್ಣುಮುಕ್ಕಿಸಿ ಸಮತಾವಾದಿ ಸರಕಾರ - ಸಮಾಜವನ್ನುಳಿಸಲು ಹೊರಟ ಕೆಂಪು ಸೇನೆಯಲ್ಲ. ಸಾಮ್ರಾಜ್ಯಶಾಹಿಗಳ ಕುತಂತ್ರದಿಂದ ಪೋಲೆಂಡನ್ನುಳಿಸಲು ಹೊರಟ ಕೆಂಪು ಸೇನೆಯೋ-ಅದೂ ಅಲ್ಲ. ಹಾಗಾದರೆ ಈ ಕೆಂಪು ಸೇನೆ ಎಲ್ಲಿಂದ ಹೊರಟಿದೆ, ಎಲ್ಲಿಗೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ರಾಜ್ಯದ 11ನೇ ಸಮ್ಮೇಳನ ಮಂಗಳೂರಿನಲ್ಲಿ ಡಿಸೆಂಬರ್ 11 ರಿಂದ 14ರವರೆಗೆ ನಡೆಯಿತು. ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪ್ರಭಾವವೆಷ್ಟು ಬೆಳೆದಿದೆ, ರೈತ-ಕಾರ್ಮಿಕರಲ್ಲಿ, ಯುವಕ-ವಿದ್ಯಾರ್ಥಿಗಳಲ್ಲಿ ಅದೆಷ್ಟು ಕೆಲಸ ಮಾಡಿ, ಹೋರಾಡಿ, ರಾಜಕೀಯ ಜಾಗೃತಿಯನ್ನುಂಟುಮಾಡಿದೆ, ತ್ಯಾಗ-ಬಲಿದಾನಕ್ಕೆ ಸಿದ್ಧಗೊಳಿಸಿದೆ ಎಂಬುದನ್ನು ತೋರ್ಪಡಿಸಲು ಇದೊಂದು ಒಳ್ಳೆ ಅವಕಾಶ. ದ.ಕ. ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರಾಜ್ಯ ಸಮ್ಮೇಳನದ ಈ ಸಂದರ್ಭದಲ್ಲಿ, ತನ್ನಲ್ಲಿ ಬೆಳೆದು ಬಂದಿರುವ ಐಕ್ಯತೆ-ಬೆಳವಣಿಗೆಯನ್ನು ತೋರ್ಪಡಿಸಲು ಮುಂದಾಯಿತು. 2000 ಕೆಂಪು ಸಮವಸ್ತ್ರಧಾರಿ ಯುವಕರಲ್ಲದೆ, 3000ಕ್ಕೂ ಮೇಲ್ಪಟ್ಟು ಕೆಂಪು ದಡಿಯ ಬಿಳಿಸೀರೆ ಉಟ್ಟ ಯುವತಿಯರು ಯುವಕರಿಂದ ನಾವು ಹಿಂದೆ ಬಿದ್ದಿಲ್ಲ-ಬೀಳುವುದೂ ಇಲ್ಲ ಎಂಬ ರೀತಿಯಿಂದ ಹೆಜ್ಜೆಗೆ ಹೆಜ್ಜೆ ಇಟ್ಟು ನಡೆಯುವ ರಮ್ಯ ದೃಶ್ಯ. ಅವರ ಬೆನ್ನೆಲುಬಾಗಿ ಹಿರಿಯರಂತೆಯೇ ಕಿರಿಯರೂ ಕೂಡ, ನಾವು ಯಾವುದರಲ್ಲೂ ಹಿರಿಯರಿಗಿಂತ ಹಿಂದೆಬಿದ್ದವರಲ್ಲೆಂಬಂತೆ 500ಕ್ಕೂ ಮೇಲ್ಪಟ್ಟು 6 ವರ್ಷದಿಂದ 12 ವರ್ಷದ ವರೆಗಿನ ಮುದ್ದು ಮಕ್ಕಳು ಸಮವಸ್ತ್ರಧಾರಿಗಳಾಗಿ ಎದೆಯುಬ್ಬಿಸಿ ಹೆಜ್ಜೆ ಇಡುತ್ತಿರುವುದನ್ನು ನೋಡುವವರಿಗೆಲ್ಲ ತಮ್ಮ ನರಗಳಲ್ಲಿ ರಕ್ತದೊತ್ತಡ ಹೆಚ್ಚಾಗುತ್ತಿರುವುದು ಕಂಡುಬರುತ್ತಿತ್ತು. ಮೆರವಣಿಗೆ ಹೋಗುತ್ತಿದ್ದಂತೆಯೇ ದ.ಕ. ಜಿಲ್ಲೆಯ ಹಾಗೆಯೇ ಧಾರವಾಡ, ಹುಬ್ಬಳ್ಳಿ, ಹರಿಹರ, ಶಿವಮೊಗ್ಗ, ಮೈಸೂರು, ಹಾಸನ, ಚಿಕ್ಕಮಂಗಳೂರು, ಕೊಡಗು ಮೊದಲಾದ ಜಿಲ್ಲೆಗಳಿಂದಲೂ ಅಲೆ ಅಲೆಯಾಗಿ ಸಣ್ಣನದಿ ದೊಡ್ಡನದಿಯನ್ನು ಸೇರುವಂತೆ - ಮುಖ್ಯ ಮೆರವಣಿಗೆಯನ್ನು ಸೇರುತ್ತಲೇ ಇತ್ತು. ದೂರದ ಬಿಜಾಪುರದಿಂದ ಬಂದ ಡೊಳ್ಳು, ದ. ಕ. ಜಿಲ್ಲೆಯ ಹಲವಾರು ತರದ ವಾದ್ಯ, ಕೊಂಬು, ತಮಟೆಗಳಲ್ಲದೆ, ನಾನಾತರ ವೇಷಗಳು ಮೆರವಣಿಗೆಗೆ ಶೋಭೆ ತಂದಿದ್ದವು. ಆಕಾಶವನ್ನೇ ಸೀಳುವ ರೀತಿಯಲ್ಲಿ ಘೋಷಣೆಗಳು ಮೊಳಗುತ್ತಿದ್ದವು.

ನಾನು, ನಂಜುಂಡಪ್ಪನವರು ಒಂದೇ ಜಾಗದಲ್ಲಿ ಮೆರವಣಿಗೆ ದಾಟಲು ಬೇಕಾದ ಸಮಯ ನೋಡಲಾಗಿ ~~ಅದು ಸರಿಯಾಗಿ~~ 60 ನಿಮಿಷ. ನಾಲ್ಕು ಮೈಲುದ್ದ ಮೆರವಣಿಗೆ. 20,000 ಸ್ತ್ರೀಪುರುಷರು. ಇವರನ್ನೆಲ್ಲ ಎಲ್ಲಿಂದ ತಂದಿದ್ದೀರಿ. ನಿಮ್ಮ ಸಂಘಟನೆ ಇಷ್ಟು ಬೆಳೆದದ್ದು ಗೊತ್ತೇ ಇಲ್ಲವಲ್ಲ. ಒಳ್ಳೆಯದಾಯಿತು. ಇನ್ನೂ ಹೆಚ್ಚು ಕೆಲಸ ಮಾಡಿರಿ. ಬಲಗೊಳ್ಳಿರಿ: ಇದೆಲ್ಲ ಸಾರ್ವಜನಿಕರ ಪ್ರತಿಕ್ರಿಯೆಗಳು.

1964ರಲ್ಲಿ ಬಲಪಂಥೀಯರಿಂದ, ಪರಿಷ್ಕರಣವಾದಿಗಳಿಂದ ಬೇರ್ಪಟ್ಟು, ಸಂಘಟನೆಯಲ್ಲಿ ತಿದ್ದುಪಡಿಗಳನ್ನು ತಂದು ಮುಂದೆ ಹೋಗುತ್ತಿರುವಾಗ, ರಾಜ್ಯದ ಮುಖಂಡತ್ವದಲ್ಲಿ ಎಡ ಪಂಥವಾದ ಮೊರೆ ಹೊಕ್ಕ ಕಾರಣ 8-10 ವರ್ಷ ಪಾರ್ಟಿ ಮತ್ತು ಸಾಮೂಹಿಕ ಸಂಘಟನೆಗಳನ್ನು ಸರಿದಾರಿಯಲ್ಲಿ ಮುಂದುವರೆಸಲು, ಬೆಳೆಸಲು ಸಾಧ್ಯವಾಗಲಿಲ್ಲ. ಕಳೆದ ಮೂರು ವರ್ಷಗಳಿಂದ ಪಾರ್ಟಿಯ ಮುಖಂಡತ್ವ ತಮ್ಮ ತಪ್ಪುಗಳನ್ನು ತಿದ್ದಿಕೊಂಡು, ಪಾರ್ಟಿ ಕೇಂದ್ರದ ನೇತೃತ್ವದಲ್ಲಿ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಪಾರ್ಟಿಯ ಕೆಲಸ-ಪದ್ಧತಿಗಳಲ್ಲಿ ಬದಲಾವಣೆ ತಂದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ರಾಜಕೀಯ ನಿಲುವನ್ನು, ಸಾಮೂಹಿಕ ಸಂಘಟನೆಗಳ ಹೋರಾಟಕ್ಕೆ ಸರಿಯಾದ ಮಾರ್ಗದರ್ಶನವನ್ನು, ಮಾಡಿದ್ದರಿಂದ ಸಾಮೂಹಿಕ ಸಂಘಟನೆಗಳೂ, ಪಾರ್ಟಿಯೂ ಬಲಗೊಳ್ಳಲು ಸಾಧ್ಯವಾಯಿತು. ಮಲಪ್ರಭ ರೈತರ ಹೋರಾಟ, ಅದಕ್ಕೆ ಬೆಂಬಲ, ಬೆಲೆಯೇರಿಕೆ ವಿರುದ್ಧ ಚಳುವಳಿ-ಬಂದ್‌ಗಳು, ಬೆಂಗಳೂರಿನ ಕೇಂದ್ರ ಕೈಗಾರಿಕಾ ನೌಕರರ ಹೋರಾಟಕ್ಕೆ ಬೆಂಬಲ, ದಾಂಡೇಲಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ, ರೈತರ ಸತ್ಯಾಗ್ರಹ, ವಿದ್ಯಾರ್ಥಿಗಳ ಚಳುವಳಿ, ಚರಿತ್ರಾರ್ಹವಾದ ರೈತ ಜಾಥಾ, ಅದಕ್ಕೆ ಕಾರ್ಮಿಕರ ಬೆಂಬಲ, ಮಂತ್ರಿ ಇಬ್ರಾಹಿಂ ರಾಜೀನಾಮೆಗೆ ಚಳುವಳಿಗಳಲ್ಲಿ ರಾಜ್ಯಾದ್ಯಂತ ನಡೆದು, ಮೂರು ವರ್ಷಗಳ ಹಿಂದಿನ ಜಡತ್ವವನ್ನು ಹಿಮ್ಮೆಟ್ಟಿಸಿ ಹೊಸ ಶಕ್ತಿ ಚಾಲನೆಯಿಂದ ಸರಿದಾರಿಯಲ್ಲಿ ಮುನ್ನಡೆಯುವಂತೆ ರಾಜ್ಯ ಮುಖಂಡತ್ವ ಚಾಲನೆ ಕೊಟ್ಟಿದ್ದರಿಂದಲೇ ಕಮ್ಯುನಿಸ್ಟ್ ಪಾರ್ಟಿಯ ಚರಿತ್ರೆಯಲ್ಲಿ ಈ ಹಿಂದೆ ಆಗದ ರೀತಿಯಲ್ಲಿ ಮೆರವಣಿಗೆ ಸಭೆ ನಡೆಯಲು ಸಾಧ್ಯವಾಯಿತು. ತಮಿಳುನಾಡಿನ ಪಾರ್ಟಿ ಮುಖಂಡರಾದ ಕಾಂ. ಉಮಾನಾಥ ಅವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ "1973ರಲ್ಲಿ ದಕ್ಷಿಣ ವಲಯದ ಬೀಡಿ ಕಾರ್ಮಿಕರ ಸಮ್ಮೇಳನ ನಡೆದಾಗ ಇದೇ ರೀತಿಯ ಮೆರವಣಿಗೆ ನೋಡಿದ್ದೆ. ಅದಕ್ಕೂ-ಇದಕ್ಕೂ ಬಹಳ ವ್ಯತ್ಯಾಸವಿದೆ. ಇಂದಿನ ಮೆರವಣಿಗೆ ಸಂಖ್ಯೆಯಲ್ಲಷ್ಟೇ ಹೆಚ್ಚಾಗಿರುವುದಲ್ಲದೇ, ಗಂಡಸರಿಗಿಂತ ಹೆಚ್ಚು ಮಹಿಳೆಯರು ಕಾಣುತ್ತಿದ್ದಾರೆ. ಹಾಗೆಯೇ ಮೆರವಣಿಗೆಗಾರರಲ್ಲಿ ಕ್ರಾಂತಿ ಸ್ವರೂಪ ಹೆಚ್ಚಾಗಿ ಎದ್ದು ಕಾಣುತ್ತಿದೆ" ಎಂದಿದ್ದಾರೆ.

ಕ್ರಾಂತಿಕಾರಿ ಕಮ್ಯುನಿಸ್ಟ್ ಪಾರ್ಟಿ ತಾನೇನಾದರೂ ತಪ್ಪು ಮಾಡಿದರೆ, ತನ್ನ ಧೋರಣೆ, ನೀತಿ-ನಿರೂಪಣೆ ತಪ್ಪೆಂದು ತನ್ನ ಅನುಭವದಿಂದ ಕಂಡುಬಂದರೆ, ತಪ್ಪನ್ನೊಪ್ಪಿಕೊಂಡು, ಅದನ್ನು ತಿದ್ದಿಕೊಳ್ಳಲು, ತಿದ್ದಿಕೊಂಡು ಸರಿದಾರಿಯಲ್ಲಿ ಮುನ್ನಡೆಯಲು ಹಿಂಜರಿಯುವುದಿಲ್ಲ.

ಕಳೆದ 3 ವರ್ಷಗಳಲ್ಲಿ ಅದರಲ್ಲೂ 1980-81ರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ಹಾಗೂ ಸಾಮೂಹಿಕ ಸಂಘಟನೆಗಳು ನಡೆಸಿದ ಹೋರಾಟಗಳು ಹಲವಾರು. ಅದರಲ್ಲೂ ವಿರೋಧಿ ಪಕ್ಷಗಳನ್ನೂ, ಬಲ ಕಮ್ಯುನಿಸ್ಟ್ ಪಾರ್ಟಿಯನ್ನೂ ಒಟ್ಟುಸೇರಿಸಿ ನಡೆಸಿದ ಚಳುವಳಿಗಳೂ ಪರಿಣಾಮಕಾರಿ. ಮಲಪ್ರಭಾ ರೈತರ ಚಳುವಳಿಯಲ್ಲೂ, ಮಂತ್ರಿ ಇಬ್ರಾಹಿಂ ವಿರುದ್ಧ ಚಳುವಳಿಯಲ್ಲೂ ನಾವು ಗೆದ್ದಿದ್ದೇವೆ. ಹಾಗೆಯೇ ಸಕ್ಕರೆ ಮತ್ತಿನ್ನಿತರ ಅತ್ಯಾವಶ್ಯಕ ವಸ್ತುಗಳ ವಿತರಣೆ ಸರಿಪಡಿಸುವಲ್ಲೂ ಸ್ವಲ್ಪ ಮಟ್ಟಿಗೆ ಗೆದ್ದಿದ್ದೇವೆ. ಭ್ರಷ್ಟ ಭೂ ನ್ಯಾಯ ಮಂಡಳಿಗಳ ವಿರುದ್ಧ ಹೋರಾಟದಲ್ಲೂ, ಭೂ ಆಕ್ರಮಣ ಚಳುವಳಿಯಲ್ಲೂ ಗೆಲುವು ಕಂಡಿದ್ದೇವೆ. ಕಾರ್ಮಿಕರ-ವಿದ್ಯಾರ್ಥಿಗಳ ಹಲವಾರು ಯಶಸ್ವಿ ಹೋರಾಟ ನಡೆಸಿದ್ದೇವೆ. ಇಂಥ ಹಲವಾರು ಹೋರಾಟಗಳಿಂದಾಗಿಯೇ ಪಾರ್ಟಿ ಸದಸ್ಯತ್ವವೂ ಹೆಚ್ಚಾಗಿದೆ, ಸಿ. ಐ. ಟಿ. ಯು. ಸದಸ್ಯತ್ವ 45000 ಮೀರಿದೆ, ರೈತ ಸಂಘದ ಸದಸ್ಯತ್ವ ಅರ್ಧ ಲಕ್ಷ ದಾಟಿದೆ, ವಿದ್ಯಾರ್ಥಿ, ಯುವಜನ ಸಂಘಟನೆಯ ಸದಸ್ಯತ್ವ ಹತ್ತು ಸಹಸ್ರವಾಗಿದೆ. ಈ ಎಲ್ಲ ಕಾರಣಗಳಿಂದಾಗಿಯೇ ಮಂಗಳೂರಿನಲ್ಲಿ ಸೇರಿದ 11ನೇ ರಾಜ್ಯ ಸಮ್ಮೇಳನದ ಕೊನೆ ದಿನದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಕಲಾಗಾರರೂ, ಜನತೂ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿದೆ. ಕೇರಳದ ಗಡಿಪ್ರದೇಶ ತಲಪಾಡಿಯ ಜನರ ಉದ್ಗಾರ "ನಾವು ಕೇರಳದಲ್ಲಿದ್ದೇವೆಯೋ" ಎಂದು. ಜಿಲ್ಲಾದ್ಯಂತ ಕೆಂಬಾವುಟವೇ ಕೆಂಬಾವುಟ. ಪ. ಬಂಗಾಳ, ಕೇರಳ ರಾಜ್ಯಗಳ ದೃಶ್ಯವನ್ನು ದಾರಿಯುದ್ದಕ್ಕೂ ದ. ಕ. ಜಿಲ್ಲೆಯಲ್ಲಿ ಬರುವಾಗ ಕಂಡೆ ಎಂದು ಆತ್ಮಾನಂದದಿಂದ ಹೇಳಿದವರು ದಿಲ್ಲಿಯಿಂದ ಮಂಗಳೂರಿಗೆ ಬಂದವರೊಬ್ಬರು.

ಇಷ್ಟೆಲ್ಲ ಹೇಗೆ ಸಾಧ್ಯವಾಯಿತು. ದ. ಕ. ಜಿಲ್ಲಾ ಕಾರ್ಯದರ್ಶಿಯವರಾದ ಕಾಂ. ಶ್ರೀಯಾನ್ ಉತ್ತರಿಸುತ್ತಾರೆ: ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಸರಿಯಾದ ರಾಜಕೀಯ ನಿಲುವು, ಸರ್ವಾಧಿಕಾರಿ ಶಕ್ತಿಯನ್ನು ದಮನಿಸಲು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಒಂದಾಗಿಸಬೇಕು. ಜನತೆ ಎದುರಿಸುತ್ತಿರುವ ಪ್ರತಿಯೊಂದು ಸಮಸ್ಯೆಯ ಪರಿಹಾರಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ತನ್ನದೇ ಆದ ಚಳುವಳಿ ನಡೆಸಿ ಪಾರ್ಟಿ ಧೋರಣೆಯನ್ನು ಜನರಿಗೆ ತಿಳಿಸಿ ತನ್ನ ಪ್ರತ್ಯೇಕವಾದ ಅಸ್ತಿತ್ವವನ್ನು ತೋರಿಸುವುದಷ್ಟೇ ಅಲ್ಲ, ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ರಂಗ ರಚಿಸಿಯೂ ಸಂಯುಕ್ತವಾಗಿ ಹೋರಾಡಬೇಕೆಂಬ ಪಾರ್ಟಿಯ ನಿಲುವಿನಿಂದಾಗಿ ನಾವು ಬೆಳೆದಿದ್ದೇವೆ. ನಮ್ಮ ರಾಜ್ಯಸಮಿತಿಯ ಸರಿಯಾದ ಮತ್ತು ನಿಷ್ಕೃಷ್ಟ ಮಾರ್ಗದರ್ಶನ, ನಮ್ಮ ಜಿಲ್ಲೆಯ ಮುಖಂಡತ್ವದಲ್ಲಿ ಇತ್ತೀಚೆಗೆ ಬೆಳೆದುಬಂದ ಸೈದ್ಧಾಂತಿಕ ಒಗ್ಗಟ್ಟು, ಶಿಸ್ತಿನ ಪಾಲನೆ, ಕೆಲಸದ ತಿಳುವಳಿಕೆಗಳಿಂದಾಗಿ ದ. ಕ. ಜಿಲ್ಲೆಯ ಪಾರ್ಟಿ ಚರಿತ್ರೆಯಲ್ಲಿ ಹೊಸ ದಾಖಲೆ ರಚಿಸಲು ಸಾಧ್ಯವಾಯಿತು. ಇದು ನಮ್ಮೆಲ್ಲರಲ್ಲೂ ಹೊಸ ಉತ್ಸಾಹ, ಹುಮ್ಮಸ್ಸ, ಉಲ್ಲಾಸ ತಂದಿದೆ. ಹೆಚ್ಚಿನ ಐಕ್ಯತೆಯಿಂದ ಸ್ಫೂರ್ತಿಯಿಂದ ನಾವು ಮುನ್ನುಗ್ಗುತ್ತೇವೆ, ಕಾರ್ಯಪ್ರವೃತ್ತರಾಗುತ್ತೇವೆಂದು, ತಮ್ಮದೇ ಆದ ಶಾಂತ, ಉದ್ವೇಗವಿಲ್ಲದ ಶೈಲಿಯಲ್ಲಿ ಕೆ. ಆರ್. ಶ್ರೀಯಾನ್ ವಿವರಿಸಿದರು.

ಕರ್ನಾಟಕ ರಾಜ್ಯದ ಬೇರೆಬೇರೆ ಜಿಲ್ಲೆಗಳಿಂದ ಬಂದ ಪ್ರತಿನಿಧಿಗಳೂ, ಕಡೆ ದಿವಸದ ಮೆರವಣಿಗೆ, ಸಭೆಗೆ ಬಂದವರೂ ದ.ಕ. ಜಿಲ್ಲೆಯ ಕಾಮ್ರೇಡ್‌ರ ಕೆಲಸ ನೋಡಿ, ಮೆರವಣಿಗೆ, ಸಭೆನೋಡಿ, ಇಮ್ಮಡಿ ಸ್ಫೂರ್ತಿಗೊಂಡಿದ್ದಾರಲ್ಲದೆ, ದ. ಕ. ಜಿಲ್ಲೆಯಂತೆ ತಾವೂ ಮುಂದುವರಿಯಬೇಕೆಂಬ ಪಣತೊಟ್ಟು ಹಿಂತಿರುಗಿ ಹೋಗುತ್ತಿದ್ದಾರೆಂದು ಹೇಳಿದಾಗ ಶ್ರೀಯಾನ್ ಅವರ ಮುಗುಳು ನಗು ತಾವು ಮಾಡಿದ ಕೆಲಸದ ಸಾರ್ಥಕತೆಯನ್ನು ತೋರ್ಪಡಿಸಿತು.

●

ಗ್ರಾಮಾಂತರ ಪ್ರದೇಶಗಳಲ್ಲೂ ಕಾರ್ಯಕ್ರಮ

ಇದುವರೆಗೆ ಕಲಬುರ್ಗಿ ನಗರಕ್ಕೆ ಮಾತ್ರ ಸೀಮಿತಗೊಂಡಿದ್ದ ಬಂಡಾಯ ಸಾಹಿತ್ಯ ಸಂಘಟನೆಯ ಕಲಬುರ್ಗಿ ಜಿಲ್ಲಾ ಘಟಕದ ಚಟುವಟಿಕೆಗಳನ್ನು ಇನ್ನು ಮುಂದೆ ತಾಲ್ಲೂಕು ಮತ್ತು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಲು ನಿರ್ಧರಿಸಿ ಈ ಬಗ್ಗೆ ಯೋಜನೆ ಹಾಕಿಕೊಳ್ಳಲಾಗಿದೆಯೆಂದು ಸಂಚಾಲಕ ವೀ. ಕೆ. ಸ್ವಾಮಿ ಅವರು ತಿಳಿಸಿದ್ದಾರೆ.

ಈ ಚಟುವಟಿಕೆಗಳನ್ನು ಕೈಕೊಳ್ಳುವಾಗ ಬಂಡಾಯ ಸಾಹಿತ್ಯ ಸಂಘಟನೆಯು ತನ್ನ ಸಮಾನ ಧೋರಣೆಯ ಸಾಂಸ್ಕೃತಿಕ ಸಂಘಟನೆಗಳಾದ ಸಮುದಾಯ, ದಲಿತ ಸಂಘರ್ಷ ಸಮಿತಿ, ವಿಚಾರವಾದಿ ಸಂಘ(ಬಷೀರ್ ಸಂಚಾಲಕತ್ವದ್ದು) ಮತ್ತು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳ ಸಹಕಾರವನ್ನೂ ಪಡೆಯಲಾಗುತ್ತದೆ ಎಂದರು.

ಸಂಘಟನೆಯ ಚಟುವಟಿಕೆಗಳನ್ನು ವಿಸ್ತರಿಸುವುದಕ್ಕಾಗಿ ತಾಲ್ಲೂಕು ಮಟ್ಟದ ಘಟಕಗಳನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

○

ಹೊಸಪೇಟೆಯಲ್ಲಿ ಎಸ್. ಎಫ್. ಐ. ಅಧಿವೇಶನ

ಚಳಿಗಾಲದ ಸಂಜೆಯು, ಹೊಸಪೇಟೆಯ ಬಿಸಿ ಬೀದಿಗಳಲ್ಲಿ ಉತ್ಸಾಹದ ಚಿಲುಮೆಯುಕ್ಕುವ ವಿದ್ಯಾರ್ಥಿಗಳ ಒಂದು ಮೆರವಣಿಗೆ ಹೊರಟಿತ್ತು. 9-12-81ರಂದು. ಬೀದಿ ಬ್ಯಾನರುಗಳು, ಭಿತ್ತಿ ಪತ್ರಗಳು ಭಾರತ ವಿದ್ಯಾರ್ಥಿ ಫೆಡರೇಷನ್ನಿನ ಅಧ್ಯಕ್ಷ ಬೇಬಿ ಮತ್ತು ಎ. ಕೆ. ಬಾಲನ್ ಅಲ್ಲದೆ ರಾಜ್ಯದ ಪದಾಧಿಕಾರಿಗಳು ಮಾತನಾಡುವರೆಂದು ಉತ್ಸಾಹದಿಂದ ಘೋಷಿಸುತ್ತಿದ್ದವು. ಗೋಡೆಗಳ ಕೆಂಪು ರನ್ನಿಂಗ್ ಅಕ್ಷರಗಳು ಬೇಬಿ, ಬಾಲನ್‌ರಿಗೆ ಸ್ವಾಗತ ಕೊಡುತ್ತಿದ್ದವು.

ಬಳ್ಳಾರಿಯಲ್ಲಿ ಫೆಡರೇಷನ್ನಿನ ವಿದ್ಯಾರ್ಥಿಗಳ ಮೇಲೆ ಗೋಡೆಬರಹಕ್ಕಾಗಿ ಪೋಲೀಸರು ದೌರ್ಜನ್ಯ ನಡೆಸಿದ್ದನ್ನು, ಹೊಸಪೇಟೆಯಲ್ಲಿ ಕರ್ಫ್ಯೂ ಇರುವುದನ್ನು ಪ್ರಜಾವಾಣಿಯಲ್ಲಿ ಅಂದು ಮುಂಜಾನೆ ಓದಿದ್ದೆ.

ಸ್ಪೆಷಲ್ ಪರ್ಮಿಷನ್ನಿನಿಂದ ಕೆಲವೇ ಆಯ್ದ ಬೀದಿಗಳಲ್ಲಿ ಮಾತ್ರ ಮೆರವಣಿಗೆ ನಡೆಸಲು ಅನುಮತಿ ಸಿಕ್ಕಿದೆಯೆಂದು ತಿಳಿಯಿತು. ಕೆಲವು ಘೋಷಣೆಗಳನ್ನು ಕೂಗಲಿಕ್ಕೂ ನಿರ್ಬಂಧ ಮಾಡಲಾಗುತ್ತಿತ್ತು. ಇದೆಲ್ಲ ಉದ್ದೇಶಪೂರ್ವಕ ಹತ್ತಿಕ್ಕುವಿಕೆಯೆಂದೇ ಜನ ಮಾತನಾಡುತ್ತಿದ್ದರು.

ಶಿಸ್ತಿನಿಂದ ಹೊರಟಿದ್ದ ಐದಾರು ನೂರು ವಿದ್ಯಾರ್ಥಿಗಳ ಮೆರವಣಿಗೆ ಹೊಸಪೇಟೆ ವಿದ್ಯಾರ್ಥಿ ಚರಿತ್ರೆಯ ಮುಖ್ಯ ಸಂಗತಿಯಾಗಿತ್ತು.

ಈ ಮೊದಲೆ ಹೊಸಪೇಟೆ ವಿದ್ಯಾರ್ಥಿಗಳ ಮೇಲೆ ಮೂರ್ನಾಲ್ಕು ಸಲ ಕ್ರೂರ ಹಿಂಸೆ ನಡೆದಿತ್ತು. ನೈತಿಕ ವಧೆ, ದೈಹಿಕ ದೌರ್ಜನ್ಯ ನಡೆಸಲಾಗಿತ್ತು. ಸ್ಥಳೀಯ ಪರಿಸ್ಥಿತಿಯನ್ನು ಲಂಕೇಶ ಪತ್ರಿಕೆ ಒಂದು ಸಲ ಮಿನಿ ಎಮರ್ಜೆನ್ಸಿ ಎಂದು ಬರೆದಿತ್ತು.

ಸ್ಥಳೀಯ ಕಾಲೇಜಿನ ಪ್ರಿನ್ಸಿಪಾಲ, ಪೋಲೀಸ್ ಅಧಿಕಾರಿಗಳು, ಮತ್ತು ಆರ್.ಎಸ್.ಎಸ್. ಜತೆಯಾಗಿ ಪ್ರಜಾಸತ್ತಾತ್ಮಕ ಮೌಲ್ಯಗಳ ಸಮಾಧಿ ಮಾಡುತ್ತ, ಫೆಡರೇಷನ್ನಿನ ಹುಡುಗರನ್ನು ನಾನಾರೀತಿಯ ಕಿರುಕುಳ, ಹಿಂಸೆ, ದಬ್ಬಾಳಿಕೆ, ಬೆದರಿಕೆಗಳಿಂದ ಮುಚ್ಚುತ್ತಿರುವರೆಂಬುದು ಹೊಸಪೇಟೆ ವಿದ್ಯಾವಂತ ನಾಗರಿಕರಿಗೆ ಗುಟ್ಟಿನ ವಿಷಯವೇನಾಗಿಲ್ಲ. ಕಾಲೇಜಿನ ಹಾಸ್ಟೆಲಿನಲ್ಲಿ ನಡೆಯುವ ಭ್ರಷ್ಟ ಆಡಳಿತ, ಸುಲಿಗೆ ಮಾಡುತ್ತಿರುವ ಕಾರಸ್ಥಾನದ ಬಗ್ಗೆ, ಪ್ರಾಚಾರ್ಯರ ಬೆಂಬಲ ಇತ್ಯಾದಿ ಬಗ್ಗೆ ನೋವಿನ ಅನಿವಾರ್ಯತೆಯಿಂದ ತೋಡಿಕೊಂಡ ಕರಪತ್ರಗಳು ಒಂದು ತಿಂಗಳ ಹಿಂದೆ ಹೊಸಪೇಟೆಯ ಬೀದಿಗಳಲ್ಲಿ ಜನರೆಡೆಗೆ ತಲುಪಲು ಕಾತರಿಸುತ್ತ ಬಿದ್ದಿದ್ದವು. ಆ ಕೆಲಸ ತಮ್ಮದಾದರೂ ಅಲ್ಲವೆಂದು ಒತ್ತಾಯದ ಸಹಿಗಳನ್ನು ಹಾಸ್ಟೆಲ್ ಹುಡುಗರಿಂದ ಪಡೆಯಲಾಗಿದೆ ಎಂಬುದೂ ತಿಳಿದು ಬಂತು.

ಎ.ಬಿ.ವಿ.ಪಿ.ಗೆ ನಾಕಾರು ಕಾಲೇಜು, ಹೈಸ್ಕೂಲು ಅಧ್ಯಾಪಕರು ಸೇರಿಕೊಂಡು, ಜೋರಾಗಿ ಪ್ರಚಾರ ಮಾಡುತ್ತಿದ್ದಾರೆ. ಈ ಭ್ರಷ್ಟರು ಸಂಸ್ಥೆಯನ್ನು ಹಾಳು ಮಾಡುತ್ತಿದ್ದರೂ ಕೂಡ, ಸಂಸ್ಥೆಯನ್ನು ರಕ್ಷಿಸಲು ಎ.ಬಿ.ವಿ.ಪಿ. ಸೇರಬೇಕೆಂದು ಪ್ರಚಾರಯಾತ್ರೆ ಕೈಕೊಂಡಿದ್ದಾರೆ".

ಈ ಎಲ್ಲದರ ಮಧ್ಯೆ ಬೇಬಿಯವರ ಮಾತು, ವ್ಯಕಿನಿಂದ ಹೊಸಪೇಟೆಯ ಪ್ರಗತಿಪರ, ಸಂವಿಧಾನದಲ್ಲಿ ವಿಶ್ವಾಸವಿರುವವರ ಮೂಲೆಮೂಲೆಗಳನ್ನು ತಟ್ಟಿ ಎಬ್ಬಿಸಿತು.

ವಿದ್ಯಾರ್ಥಿ ಫೆಡರೇಷನ್ ಅಸ್ಸಾಂನಲ್ಲಿಯ ವಿಚ್ಛಿದ್ರಕಾರಿ ವಿದ್ಯಾರ್ಥಿ ಚಳುವಳಿಯನ್ನು, ಗುಜರಾತಿನ ಜಾತಿವಾದಿ ವಿದ್ಯಾರ್ಥಿ ಚಳುವಳಿಯನ್ನು ಪ್ರೊ|| ಇರ್ಫಾನ್ ಹಬೀಬರಂಥ ಅಂತರಾಷ್ಟ್ರೀಯ ಖ್ಯಾತ ವಿದ್ವಾಂಸರಿಗೆ ಉಂಟಾದ ತೊಂದರೆಯನ್ನು ಎದುರಿಸಿ ಹೋರಾಡುತ್ತ, ಇಂಥ ಅಪಾಯಕಾರಿ ಚಳುವಳಿಗಳನ್ನು ವಿರೋಧಿಸುವುದರ ಮೂಲಕ, ದೇಶದ ಪ್ರಜಾಸತ್ತಾತ್ಮಕ ಮೌಲ್ಯಗಳ ಸಲುವಾಗಿ, ದೇಶದ ಐಕ್ಯತೆಯನ್ನು ರಕ್ಷಿಸುವುದಕ್ಕಾಗಿ ಎದ್ದು ನಿಲ್ಲುತ್ತದೆ. ವಿದ್ಯಾರ್ಥಿಗಳ ರಾಷ್ಟ್ರೀಯ ಸಮಸ್ಯೆಗಳ ಸಲುವಾಗಿ ನಿರಂತರ ಹೋರಾಡುತ್ತದೆ ಎಂದೆಲ್ಲಾ ಹೊಸಪೇಟೆಗೆ ಅಚ್ಚ ಹೊಸದಾಗಿ ಎಂಬಂತೆ ತಿಳಿಸಿದರು.

ಡೊನೇಶನ್, ಕ್ಯಾಪಿಟೇಶನ್, ಫೀಗಳ ಕ್ರೂರಪದ್ಧತಿ ವಿರುದ್ಧ, ನಿರುದ್ಯೋಗದ ವಿರುದ್ಧ, ಖಾಸಗಿ ಮತ್ತು ಸರಕಾರಿ ವಿದ್ಯಾಸಂಸ್ಥೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ ಅವ್ಯವಹಾರಗಳ ವಿರುದ್ಧ, ವಿದ್ಯಾರ್ಥಿಗಳ ಸಹಜ ಹಕ್ಕು, ನ್ಯಾಯಗಳ ಪರವಾಗಿ ಅನಿವಾರ್ಯದ ಹೋರಾಟ ಮಾಡಬೇಕಾದ ಜವಾಬ್ದಾರಿ ಫೆಡರೇಷನ್ನಿಗೆ ಬಂದಿದೆ ಎಂದು ಬೇಬಿ ತಮ್ಮ ಮಲೆಯಾಳಿ ಟ್ಯೂನಿನ ತಿಳಿ ಇಂಗ್ಲೀಷಿನಲ್ಲಿ ಖಂಡಿತಗೊಳಿಸುತ್ತಿದ್ದ ಶೈಲಿ, ಸ್ವಭಾವ ಮಾರ್ಮಿಕವಾಗಿತ್ತು.

ಜನವಿರೋಧಿ, ಮತ್ತು ಅಂಥವರ ಏಜಂಟರಂತಿರುವ ಪೋಲಿಸರಿಂದ, ಗೂಂಡಾಗಳಿಂದ, ಎಸ್. ಎಫ್. ಐ. ಸಂಗಾತಿಗಳನೇಕರು, ಬಲಿದಾನವಾದರು, ಏಳುಲಕ್ಷದವರೆಗೆ ಸದಸ್ಯತ್ವ ಹೊಂದಿರುವ ಬಗ್ಗೆ ಹೇಳಿ ಬೇಬಿ ಹೆಮ್ಮೆಯುಂಟು ಮಾಡಿದರು.

ಹೊಸಪೇಟೆಯ ಅಧಿವೇಶನಕ್ಕೆ ಸಹಾಯಿಸಿದ, ನಾಗರಿಕರನ್ನು ಅಭಿನಂದಿಸಿದರು. ರುದ್ರಪ್ಪಕಾಯಿ ಅಷ್ಟೇ ಗಟ್ಟಿಯಾದ ಕನ್ನಡದಲ್ಲಿ ಬೇಬಿಯವರ ಭಾವನೆಗಳನ್ನು ಭಟ್ಟಿ ಇಳಿಸಿದರು.

ಆರಾಧ್ಯ, ಬಸವರಾಜ, ಜಯಕುಮಾರು ಕನ್ನಡ ನಾಡಿನಲ್ಲಿ ಎಸ್. ಎಫ್. ಐ. ಹೋರಾಟದ ಸ್ವರೂಪವನ್ನು, ಅಧಿವೇಶನದಲ್ಲಿ ಕೈಕೊಂಡ ನಿರ್ಣಯಗಳನ್ನು ಕುರಿತು ಮೋಹಕವಾಗಿ ಮಾತನಾಡಿದರು. ಇದಕ್ಕೆ ಮಿಸುಗಾಡದ, ತಾಸೆರಡು ನಿಂತು, ಕೇಳಿದ ಸಭಿಕರೆ ಸಾಕ್ಷಿ.

ವಿಜಯನಗರ ಉಕ್ಕಿನ ಕಾರಖಾನೆಯ ಅಗತ್ಯವನ್ನು ಒತ್ತಿ ಹೇಳಿದ ಆರಾಧ್ಯ, ವಿದ್ಯಾಸಂಸ್ಥೆಗಳಲ್ಲಿ ನಡೆವ ಕ್ರೂರ ಭ್ರಷ್ಟತೆಯ ನಗ್ನ ಚಿತ್ರಕೊಡುತ್ತಹೋದರು.

ಸಭೆಯ ಮುಕ್ತಾಯದಲ್ಲಿ, ಈ ಮೊದಲೆ ಇದ್ದ, ಅಸಹಜವಾದ, ಹುಟ್ಟು ಹಾಕಲ್ಪಟ್ಟ ಟೆನ್‌ಶನ್ ಎಲ್ಲ ತಣ್ಣಗಾಗಿ, ಗಂಭೀರ ವೈಚಾರಿಕ, ಜವಾಬ್ದಾರಿಯ ವಾತಾವರಣವೆಂದು ಹುಟ್ಟಿಕೊಂಡು, ಮೈಕೊಡವಿಕೊಂಡ ಬೀದಿಗಳು, ಮಿಳಿಮಿಳಿ ಕಣ್ಣು ಬಿಡುತ್ತಿರುವಂತೆ ಕಂಡಿತು.

ಹೈಸ್ಕೂಲು, ಕಾಲೇಜುಗಳ ಹುಡುಗ-ಹುಡುಗಿಯರು (50ಮೈಲಿ ದೂರದ ಹಡಗಲಿಂದ 50 ವಿದ್ಯಾರ್ಥಿಗಳು ಸೈಕಲ್ ಜಾಥಾ ಬಂದಿದ್ದರು. (ಸುಮಾರು 200 ಗಂಗಾವತಿಯ ವಿದ್ಯಾರ್ಥಿಗಳು ಬಂದಿದ್ದರು) ಶಿಸ್ತು, ಸಹನೆ, ಶಾಂತತೆಯಿಂದ ಆದರ್ಶವೆಂಬಂತೆ ನಡೆದುಕೊಂಡರು.

ಬಳ್ಳಾರಿ ಜಿಲ್ಲೆಯ ಬೆಂಕಿಯುರು, ಹೊಸಪೇಟೆಯ ಜನವಿರೋಧಿ, ದೇಶವಿರೋಧಿ, ಕ್ರೂರಶಕ್ತಿಗಳ ಮಧ್ಯೆ ಇಂಥ ನಿರ್ಮಲ ಪ್ರಜಾಸತ್ತಾತ್ಮಕ ಶಕ್ತಿಯ ಜೀವಪೂರ್ಣ, ಮಿಡಿಯುತ್ತಿರುವುದು, ತುಂಗೆಯ ಕಾಲುವೆಗಳಲ್ಲಿ ಮಿಂಚುತ್ತಿದ್ದ ಬೆಳಕಿನಂತೆ ಆಶಾದಾಯಕವೆಂದು ತೋರುತ್ತಿತ್ತು.

ವರದಿ : ಹಿಮು

ಜ. 19ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ : ಉಮಾನಾಥ

ಇಂದಿರಾ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಜನವರಿ 19ರಂದು ದೇಶದಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ ಎಂದು ಕೇಂದ್ರ ಸಮಿತಿ ಸದಸ್ಯ ಮತ್ತು ತಮಿಳ್ನಾಡು ಶಾಸಕ ಕಾಂ. ಆರ್. ಉಮಾನಾಥ ಕರೆ ನೀಡಿದರು. ಅವರು, ಪಕ್ಷದ ರಾಜ್ಯಸಮ್ಮೇಳನದ ಅಂಗವಾಗಿ ಡಿ. 14ರಂದು ಮಂಗಳೂರಿನ ನೆಹರೂ ಮೈದಾನವಲ್ಲಿ ನೆರೆದಿದ್ದ ಭಾರೀ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ಗಣನೀಯ ಮುನ್ನಡೆ ಸಾಧಿಸಿರುವುದನ್ನು ಕಂಡು ಹೆಮ್ಮೆಪಟ್ಟ ಕಾಂ. ಉಮಾನಾಥರು ತಮಿಳ್ನಾಡು ರಾಜ್ಯ ಘಟಕದ ಪರವಾಗಿ ಶುಭಕೋರಿದರು.

1972ರಲ್ಲಿ ದಿವಂಗತ ಕಾಂ. ಎ. ಕೆ. ಜಿ. ಯವರ ಜೊತೆ ರಾಜ್ಯಕ್ಕೆ ಭೇಟಿ ನೀಡಿದ್ದನ್ನು ಸ್ಮರಿಸಿಕೊಂಡ ಕಾಂ. ಉಮಾನಾಥರು ಈ ಅವಧಿಯಲ್ಲಿ ಬಲಿಷ್ಠ ಸಂಘಟನೆ ಕಟ್ಟಿರುವ ಪಕ್ಷದ ಕಾರ್ಯಕರ್ತರನ್ನು ಅಭಿನಂದಿಸಿದರು.

ಮಹಿಳೆಯರಿಗೆ ಮಂಗಳಸೂತ್ರಕ್ಕೆ ಬೇಕಾದ ಚಿನ್ನದ ಬೆಲೆ ಗಗನಕ್ಕೇರಿದೆ ಎಂದು ಬೊಬ್ಬೆಮಾಡಿ 1980ರಲ್ಲಿ ಪುನಃ ಅಧಿಕಾರಕ್ಕೆ ಬಂದ ಇಂದಿರಾ ಆಡಳಿತದಲ್ಲಿ ಚಿನ್ನದ ಬೆಲೆ ಮಾತ್ರವಲ್ಲ; ಮಂಗಳಸೂತ್ರಕ್ಕೆ ಬೇಕಾದ ದಾರದ ಬೆಲೆಯೂ ಹೆಚ್ಚಿದೆ ಎಂದು ಕಾಂ. ಉಮಾನಾಥ ವ್ಯಂಗ್ಯವಾಡಿದರು.

ಕಾರ್ಮಿಕರು ಹೆಚ್ಚು ಸಂಬಳ ಪಡೆಯುವುದರಿಂದ ಹೆಚ್ಚು ಹಣ ಚಲಾವಣೆಯಾಗುವುದು; ಹೆಚ್ಚು ಹಣ ಚಲಾವಣೆಯಾಗುವುದರಿಂದ ಹಣದುಬ್ಬರ ಹೆಚ್ಚುವುದು; ಇದು ಇಂದಿರಾಗಾಂಧಿ ವಿಶ್ಲೇಷಣೆಮಾಡುವ ರೀತಿ ಎಂದ ಕಾಂ. ಉಮಾನಾಥರು ವಿಪರೀತ ಬೆಲೆಏರಿಕೆಯಿಂದ ತತ್ತರಿಸುತ್ತಿರುವ ಜನತೆ ಹೋರಾಟ ಮಾಡಿದರೆ ಬಂದೂಕು, ದೊಣ್ಣೆಗಳಿಂದ ಹೋರಾಟವನ್ನು ಸದೆಬಡೆಯುತ್ತಿರುವ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದರು. ಮೀಸಾ (MISA) ಎನ್. ಎಸ್. ಎ.ಗಳನ್ನು ಹೋರಾಟಗಳನ್ನು ಸದೆಬಡಿಯುವ ಅಸ್ತ್ರವಾಗಿ ಉಪಯೋಗಿಸುತ್ತಿರುವ ಇಂದಿರಾ ಅವರಿಗೆ ಕಾಂ. ಉಮಾನಾಥರು ಎಚ್ಚರಿಕೆ ಕೊಟ್ಟು ಇದು 1975 ಅಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂದರು. ಬೆಲೆಏರಿಕೆಯಿಂದ ತತ್ತರಿಸಿ ಪೋಲೀಸ್ ಇಲಾಖೆಯವರೂ, ಜೈಲು ಇಲಾಖೆಯವರೂ ಮುಷ್ಕರ ಹೂಡುತ್ತಿರುವುದನ್ನು ಉದಹರಿಸಿದ ಕಾಂ. ಉಮಾನಾಥರು ಐ. ಎಂ. ಎಫ್. ಸಾಲಕ್ಕಾಗಿ ದೇಶದ ಗೌರವವನ್ನು ಅಡವಿಟ್ಟ ಇಂದಿರಾ ಸರಕಾರದ ಕ್ರಮವನ್ನು ಖಂಡಿಸಿದರು.

ನ. 23ರಂದು ದೆಹಲಿಯಲ್ಲಿ ನಡೆದ ಮುತಪ್ರದರ್ಶನವನ್ನು ಯಶಸ್ವಿಗೊಳಿಸಿದ್ದಕ್ಕಾಗಿ ಕಾರ್ಮಿಕವರ್ಗವನ್ನು ಅಭಿನಂದಿಸಿದ ಕಾಂ. ಉಮಾನಾಥರು ಸರ್ವಾಧಿಕಾರಿ ಇಂದಿರಾ ಸರಕಾರ ಕಾರ್ಮಿಕವಿರೋಧಿ-ಜನವಿರೋಧಿ ಧೋರಣೆಯನ್ನು ಪ್ರತಿಭಟಿಸಿ ಜ. 19, 1982ರಂದು ದೇಶಾದ್ಯಂತ ನಡೆಯಲಿರುವ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿ ಎಂದು ಕರೆ ನೀಡಿದರು.

●

ರಾಯಚೂರು ಜಿಲ್ಲಾ ಸಮ್ಮೇಳನ

ಡಿ. 4 ಮತ್ತು 5ರಂದು ರಾಯಚೂರು ನಗರದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಘಟಕದ ಪ್ರಥಮ ಸಮ್ಮೇಳನವನ್ನು ನಡೆಸಲಾಯಿತು. ಸಮ್ಮೇಳನವನ್ನು ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸಿ. ನಂಜುಂಡಪ್ಪನವರು ಉದ್ಘಾಟಿಸಿದರು. ರಾಜ್ಯಸಮಿತಿಯ ಸದಸ್ಯರಾದ ಕಾಂ. ಎನ್. ಕೆ. ಉಪಾಧ್ಯಾಯ ಮತ್ತು ಮಹಮ್ಮದ್ ಹಸನ್‌ಖಾನ್‌ರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಾರ್ಯದರ್ಶಿ ಕಾಂ. ಚಂದ್ರಶೇಖರ ಬಾಳೆಯವರು ವರದಿ ಸಲ್ಲಿಸಿದರು. ವರದಿಯ ಮೇಲೆ ಸುದೀರ್ಘ ಚರ್ಚೆ ನಡೆದು ಕೊನೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಪ್ರತಿನಿಧಿಗಳನ್ನುದ್ದೇಶಿಸಿ ಕಾಂ. ಎನ್. ಕೆ. ಮತ್ತು ಕಾಂ. ಹಸನ್‌ಖಾನ್‌ರು ಮಾತನಾಡಿ ಸಮ್ಮೇಳನಕ್ಕೆ ಶುಭ ಕೋರಿದರು.

ಕೊನೆಯಲ್ಲಿ ಏಳು ಜನರ ಒಂದು ಪ್ರಾದೇಶಿಕ ಸಮಿತಿಯನ್ನು ರಚಿಸಿ ಕಾಂ. ಚಂದ್ರಶೇಖರ ಬಾಳೆಯವರನ್ನು ಕಾರ್ಯದರ್ಶಿಯಾಗಿ ಮರುಚುನಾಯಿಸಲಾಯಿತು.

ಸಮ್ಮೇಳನದ ಅಂಗವಾಗಿ ಡಿ. 5ರಂದು ಬಹಿರಂಗಸಭೆ ನಡೆಯಿತು. ಸಭೆಗೆ ಮುನ್ನ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಗರದ ಮಹಿಳಾ ಸಮಾಜದ ಆವರಣದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾರ್ಯದರ್ಶಿ ಕಾಂ. ಬಾಳೆಯವರು ಸಮ್ಮೇಳನದಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ವಿವರಿಸಿದರು.

ನಂತರ ಸಭೆಯನ್ನುದ್ದೇಶಿಸಿ ಕಾಂ. ಹಸನ್‌ಖಾನ್, ಸಿ. ನಂಜುಂಡಪ್ಪ ಮತ್ತು ಕಾಂ. ಪುರುಷೋತ್ತಮ ಕಲಾಲ್‌ಬಂಡಿಯವರು ಮಾತನಾಡಿದರು.

ಕಾಂ. ಇ. ಎಂ. ಎಸ್.ರ ಕರೆ

ಎಡ-ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗೆ ಶ್ರಮಿಸಿ

[ಕಳೆದ ಸಂಚಿಕೆಯಿಂದ]

"ತಮ್ಮಿಚ್ಛೆಯ ಮೇರೆಗೆ ನ್ಯಾಯಾಧೀಶರ-ಅಧಿಕಾರಿಗಳ ವರ್ಗಾವಣೆ-ಸಧ್ಯದ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ನಾಶಮಾಡಿ ಅಧ್ಯಕ್ಷೀಯ ಮಾದರಿ ವ್ಯವಸ್ಥೆಯನ್ನು ತಂದು ವಂಶ ಪಾರಂಪರ್ಯ ಆಳ್ವಿಕೆ ಮುಂದುವರಿಸಲು ಇಂದಿರಾ ಯತ್ನಿಸುತ್ತಿದ್ದಾರೆ" ಎಂದು ಇ.ಎಂ.ಎಸ್. ಆಪಾದಿಸಿದರು.

ಇಂದಿರಾ ಕಾಂಗ್ರೆಸ್ ಆಗಲಿ, ಇಲ್ಲವೇ ಜನತಾ ಮತ್ತಿತರ ಪಕ್ಷಗಳಿಂದಲೇ ಆಗಲಿ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ. ಬದಲಾಗಿ ಸಾಮ್ರಾಜ್ಯಶಾಹಿ ವಿರೋಧಿ, ಸರ್ವಾಧಿಕಾರೀ ವಿರೋಧಿ ಮತ್ತು ದೇಶದ ಐಕ್ಯತೆಗೆ ಮತ್ತು ಸಮಗ್ರತೆಗೆ ಬದ್ಧವಾದ ಒಂದು ಕಾರ್ಯಕ್ರಮದ ಆಧಾರದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜೊತೆಗೂಡಿದಾಗ ಮಾತ್ರ ಪರ್ಯಾಯ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಾಧ್ಯ" ಎಂದು ಇ.ಎಂ.ಎಸ್. ತಿಳಿಸಿದರು.

ಬಿ.ಜೆ.ಪಿ.ಯು ಕಾಂಗ್ರೆಗೆ ತಾನೇ ಪರ್ಯಾಯವೆಂದು ಕೊಚ್ಚಿಕೊಳ್ಳುತ್ತಿರುವುದನ್ನು ಗೇಲಿ ಮಾಡಿದ ಇ.ಎಂ.ಎಸ್.ರು ಈ ಯಾವ ಪಕ್ಷಗಳು ಪರ್ಯಾಯವಾಗಲು ಸಾಧ್ಯವಿಲ್ಲ ಬದಲಾಗಿ ಸಾಮ್ರಾಜ್ಯಶಾಹಿ-ಸರ್ವಾಧಿಕಾರಿ-ಛಿದ್ರಕಾರಿ ಶಕ್ತಿಗಳ ವಿರೋಧಿ ಅಭಿಪ್ರಾಯವಿರುವ ಎಲ್ಲಾ ಪಕ್ಷಗಳೂ ಐಕ್ಯ ತಳಹದಿಯಲ್ಲಿ ನಿರ್ದಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಒಂದಾಗಿ ಹೋರಾಟ ನಡೆಸಬೇಕು. ಇತ್ತೀಚಿನ ಉಪ ಚುನಾವಣೆಗಳು ಇದನ್ನು ದೃಢಪಡಿಸಿವೆ ಎಂದು ಕಾಂ. ಇ.ಎಂ.ಎಸ್. ಅಭಿಪ್ರಾಯಪಟ್ಟರು.

"ಭ್ರಮೆಗಳನ್ನು ಬಿಟ್ಟು ವಿರೋಧ ಪಕ್ಷಗಳು ಒಗ್ಗಟ್ಟಾಗಬೇಕು. ಇಲ್ಲವಾದಲ್ಲಿ ಜನತೆಯು ಈ ಪಕ್ಷಗಳನ್ನು ನಂಬುವುದಿಲ್ಲ".

"ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಕುರಿತು ನಾನು ಇನ್ನೂ ವಿಷದಪಡಿಸಲಿಚ್ಛಿಸುವೆ. ಕೇವಲ ಚುನಾವಣಾ ಘಟ್ಟದಲ್ಲಿ ಮಾತ್ರವಲ್ಲ. ಆರ್ಥಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಕೃಷಿಕೂಲಿಕಾರರ ಸಮಸ್ಯೆಗಳ ವಿರುದ್ಧವಾಗಿ ಹೋರಾಟ ರೂಪಿಸಬೇಕು".

ದೇಶದ ಸಮಗ್ರ ಜನತೆ ಭೂಮಾಲಕ ಬಂಡವಾಳಶಾಹಿ ಧೋರಣೆಗಳ ವಿರುದ್ಧ ಪ್ರಚಂಡ ಹೋರಾಟ ನಡೆಸಿದ್ದಾರೆ ಎಂದ ಕಾಂ. ಇ. ಎಂ. ಎಸ್.ರು 1980ರಲ್ಲಿ ಕರ್ನಾಟಕದ ರೈತಾಪಿವರ್ಗ ಸ್ವಯಂ ಸ್ಫೂರ್ತಿಯಿಂದ ಹೋರಾಟ ಕೈಗೊಂಡಿದ್ದನ್ನು ಉದಹರಿಸಿದರು. ದೇಶದ ಜನತೆ ಅಪಾರ ಸಂಕಟದಲ್ಲಿದ್ದಾಗ್ಯೂ ಪ. ಬಂಗಾಲ, ತ್ರಿಪುರ ಮತ್ತು ಕೇರಳಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸರಕಾರದ ಆಡಳಿತೆಯಲ್ಲಿ ಸ್ವಲ್ಪ ಮಟ್ಟಿಗೆ ಅನುಕೂಲ ಮಾಡಲು ಪ್ರಯತ್ನಿಸಿವೆ. ಚುನಾವಣೆ ಮಾತ್ರ ಪ್ರಾಧಾನ್ಯವಲ್ಲ. ವಿಶಾಲ ಜನತೆಯ ಹೋರಾಟ ಮಾತ್ರ ಪರ್ಯಾಯವಾಗಬಲ್ಲದು" ಎಂದರು.

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಕೇವಲ ಕನಸಲ್ಲ ಎಂದ ಕಾಂ. ಇ.ಎಂ.ಎಸ್.ರು ಇತ್ತೀಚೆಗೆ (ಮಾ. 26) ದೆಹಲಿಯಲ್ಲಿ ನಡೆದ ರೈತರ-ಕೃಷಿಕೂಲಿಕಾರರ ಬೃಹತ್ ರ್‍ಯಾಲಿ, ನವೆಂಬರ್ 23ರಂದು ಸಂಸತ್ತಿನೆದುರು ನಡೆದ ಮತಪ್ರದರ್ಶನದಲ್ಲಿ ಲಕ್ಷಾಂತರ ಕಾರ್ಮಿಕರು ಭಾಗವಹಿಸಿದ್ದನ್ನು ಇ.ಎಂ.ಎಸ್. ಉದಹರಿಸಿದರು. ಎಡ-ಪ್ರಜಾಪ್ರಭುತ್ವ ಶಕ್ತಿಗಳು ಬಲಿಷ್ಠವಾಗುತ್ತಿರುವ ಲಕ್ಷಣಗಳಿವು ಎಂದರು.

"ದೇಶದ ಭೂಮಾಲಕ-ಬಂಡವಾಳಶಾಹಿ ಪಕ್ಷಗಳು ತಮ್ಮ ತಮ್ಮಲ್ಲಿ ಕಚ್ಚಾಡುತ್ತಿರುವಾಗ ಜನತೆ ಕ್ರಿಯೆಗಿಳಿದಿದೆ. ಹೋರಾಟದ ಅಲೆ ದೇಶವ್ಯಾದ್ಯಂತ ಬೀಸುತ್ತಿದೆ ಎಂದ ಕಾಂ. ಇ.ಎಂ.ಎಸ್.ರು ಸ್ವಾತಂತ್ರ್ಯಪೂರ್ವದಲ್ಲಿ 'ಆಝಾದ್ ಹಿಂದ್ ಫೌಜ್' ಮತ್ತು ನೌಕಾದಳದ ಸೈನಿಕರ ಬಿಡುಗಡೆಗಾಗಿ ದೇಶ ಒಂದಾಗಿ ಎದ್ದು ನಿಂತು ಪ್ರತಿಭಟಿಸಿದ್ದ ಸಂದರ್ಭವನ್ನು ಜ್ಞಾಪಿಸಿಕೊಂಡರು. ಆ ಸಮಯದ ಜಾಗೃತಿಯನ್ನೇ ನಾವು ಮತ್ತೆ ಕಾಣುತ್ತಿದ್ದೇವೆ" ಎಂದರು. ಸೆಪ್ಟೆಂಬರ್ 15ರಂದು ದೆಹಲಿಯಲ್ಲಿ ನಡೆದ ವಿದ್ಯಾರ್ಥಿ-ಯುವಜನರ ರ್‍ಯಾಲಿಯನ್ನು ಪ್ರಸ್ತಾಪಿಸಿದ ಇ.ಎಂ.ಎಸ್.ರು ಕಾಂಗ್ರೆಯ ಭದ್ರಕೋಟೆ ಎಂದು ವಾಡಿಕೆಯಾದ ಹಿಂದೀ ಭಾಷಿಕ ಪ್ರದೇಶಗಳಿಂದಲೇ ಈ ಎಲ್ಲ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಪಾಲ್ಗೊಂಡಿದ್ದ ವಿಷಯವನ್ನು ತಿಳಿಸಿದರು.

ಚುನಾವಣೆಯಲ್ಲಿ ಕಾಂಗ್ರೆ ವಿಜಯದಿಂದ, ಕೇರಳ ಸರಕಾರ ಕೆಳಗಿಳಿಯಬೇಕಾಗಿ ಬಂದುದರಿಂದ ನಿರಾಶೆಗೊಳ್ಳಬೇಕಾದ ಕಾರಣವಿಲ್ಲವೆಂದ ಇ.ಎಂ.ಎಸ್.ರು ಸರಕಾರ ಬರುವುದು-ಹೋಗುವುದು ಇದ್ದೇ ಇದೆ. ಜನಸಾಮಾನ್ಯರಿಗೋಸ್ಕರ ಹೋರಾಟ ಖಂಡಿತ ಮುಂದುವರಿಯಬೇಕು; ಐ.ಎಂ.ಎಫ್. ಶರತ್ತುಗಳ ವಿರುದ್ಧ ಮನೆಮನೆಗೂ ತೆರಳಿ ಪ್ರಚಾರ ನಡೆಸಬೇಕು" ಎಂದರು. ಹೋರಾಟದ ಕಣದಲ್ಲಿ ಜನತೆ ಆಗಮಿಸುತ್ತಿದ್ದು ಯೋಗ್ಯ ನಾಯಕತ್ವ ನೀಡಬೇಕಾಗಿದೆ ಎಂದರು.

ವಿಶಾಲ ವೇದಿಕೆ

ಸರ್ವಾಧಿಕಾರಿ ವಿರೋಧಿ ವಿಶಾಲ ವೇದಿಕೆಯ ಘೋಷಣೆ ಈಗಲೂ ಸಮಂಜಸ. ಇಂದಿರಾ ಮತ್ತೆ ಅಧಿಕಾರಕ್ಕೆ ಬಂದಿದ್ದಾರೆ. ಸರ್ವಾಧಿಕಾರದತ್ತ ವಾಲುತ್ತಿರುವ ಲಕ್ಷಣಗಳು ಹೆಚ್ಚೆಚ್ಚಾಗಿ ಕಂಡುಬರುತ್ತಿವೆ. ಇತ್ತೀಚಿನ ಗಡ್‌ವಾಲ ಚುನಾವಣಾ ಘಟನೆ, ಕೇರಳ ಸರಕಾರವನ್ನು ಉರುಳಿಸಲು ನಡೆಸಿದ ಸಂಚು ಇವುಗಳೆಲ್ಲ ನಿದರ್ಶನ" ಎಂದು ಇ.ಎಂ.ಎಸ್. ತಿಳಿಸಿದರು.

"ಅವಿಶ್ವಾಸ ಗೊತ್ತುವಳಿ ನಿರ್ಣಯ, ಅಂತುಲೆ ಹಗರಣ; ಐ.ಎಂ.ಎಫ್. ಈ ಮುಂತಾದ ವಿಷಯಗಳ ಕುರಿತು ಸಂಸತ್ತಿನೆದುರು ಪ್ರಸ್ತಾಪ ಬಂದಾಗ ವಿರೋಧಿ ಪಕ್ಷಗಳು ಒಂದಾಗಿ ಸರಕಾರದ ಧೋರಣೆಗಳ ವಿರುದ್ಧ ಪ್ರತಿಭಟಿಸುತ್ತಿವೆ. ಪಾರ್ಲಿಮೆಂಟಿನ ಹೊರಗೂ ಸಾಮೂಹಿಕ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಿವೆ ಎಂದ ಇ.ಎಂ.ಎಸ್. ನವೆಂಬರ್ 23ರಂದು ದೆಹಲಿಯಲ್ಲಿ ನಡೆದ ಕಾರ್ಮಿಕರ ಬೃಹತ್ ಮತಪ್ರದರ್ಶನದಲ್ಲಿ ಬಿ.ಎಂ.ಎಸ್. ಪಾಲ್ಗೊಂಡದ್ದನ್ನು ಉದಹರಿಸಿದರು.

ಬಿ.ಜೆ.ಪಿ. ಮುಂತಾದ ಪಕ್ಷಗಳೊಂದಿಗೆ ಅಪಾರ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದ್ದರೂ ಪ್ರಸಕ್ತ ಸಂಸದೀಯ ಪ್ರಜಾಸತ್ತೆಯನ್ನು ಉರುಳಿಸುವ ಇಂದಿರಾ ಸಂಚನ್ನು ಬಿ.ಜೆ.ಪಿ.ಯೂ ಪ್ರತಿಭಟಿಸುವುದರಿಂದ ಸರ್ವಾಧಿಕಾರಿ ಪ್ರವೃತ್ತಿಗಳನ್ನು ಎದುರಿಸಲು ಬಿ.ಜೆ.ಪಿ.ಯನ್ನು ಜೊತೆಗೂಡಿಸಿಕೊಳ್ಳುವುದು ಅವಶ್ಯ ಎಂದ ಕಾಂ. ಇ.ಎಂ.ಎಸ್.ರು 'ಬಿ.ಜೆ.ಪಿ.ಯೊಂದಿಗೆ ಯಾವುದೇ ಮೈತ್ರಿ ಸಾಧ್ಯವಿಲ್ಲ' ಎಂದು ಘಂಟಾಘೋಷ ಮಾಡುತ್ತಿರುವ ಸಿ.ಪಿ.ಐ. ಮಿತ್ರರು ನ. 23ರ ರ್‍ಯಾಲಿಯಲ್ಲಿ ಬಿ.ಎಂ.ಎಸ್. ಪಾಲ್ಗೊಂಡಿದ್ದನ್ನು ಏಕೆ ಪ್ರತಿಭಟಿಸಲಿಲ್ಲ ಎಂದು ಪ್ರಶ್ನಿಸಿದರು.

ಯುದ್ಧದ ಭೀತಿ ಹೆಚ್ಚಾಗಿರುವುದರಿಂದ, ದೇಶದ ಐಕ್ಯತೆ ಮತ್ತು ಸಮಗ್ರತೆಗಳ ಗಂಡಾಂತರದಲ್ಲಿರುವುದರಿಂದ, ಸಾಮ್ರಾಜ್ಯಶಾಹಿ ಅಪಾಯ ಹೆಚ್ಚಾಗಿರುವುದರಿಂದ ಸರ್ವಾಧಿಕಾರಿ ವಿರೋಧಿ ಶಕ್ತಿಗಳ ಒಳಗೊಂಡ ವಿಶಾಲ ವೇದಿಕೆಯೊಂದು ಅತ್ಯಂತ ಅವಶ್ಯಕ ಎಂದು ಇ. ಎಂ. ಎಸ್. ಸ್ಪಷ್ಟಪಡಿಸಿದರು. ಹೊಂದಾಣಿಕೆ ಎಂದರೆ ವಿದೇಶಾಂಗ-ಆಂತರಿಕ ಪರಿಸ್ಥಿತಿಯಲ್ಲಿ ತತ್ವಗಳನ್ನು ಬಿಟ್ಟು ಹೊಂದಾಣಿಕೆ ಅಲ್ಲ. ಜನತೆಯ ಸಮಸ್ಯೆಯ ಆಧಾರದ ಮೇಲೆ ಹೊಂದಾಣಿಕೆ. ದೇಶದ ಸ್ವಾತಂತ್ರ್ಯ ಉಳಿಸಲು ಎಡ ಮತ್ತು ಪ್ರಜಾಪ್ರಭುತ್ವ ರಂಗ ಮತ್ತು ಸರ್ವಾಧಿಕಾರಿ ವಿರೋಧಿ ವೇದಿಕೆ ಇವೆರಡರಲ್ಲೂ ಪರಸ್ಪರ ಸಂಬಂಧವಿದೆ ಎಂದು ಇ.ಎಂ.ಎಸ್. ತಿಳಿಸಿದರು.

"4 ವರ್ಷಗಳ ಅವಧಿಯಲ್ಲಿ ಕಾರ್ಯಗತವಾಗಿರುವ ಕಾರ್ಯಕ್ರಮಗಳು, ನಿಮ್ಮ ಅನುಭವಗಳನ್ನು ಈ ಎಲ್ಲ ವಿಷಯಗಳ ಕುರಿತು ಈ 11ನೇ ರಾಜ್ಯಸಮ್ಮೇಳನದಲ್ಲಿ ಸುದೀರ್ಘ ಚರ್ಚಿಸಿ ರಾಜ್ಯದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸುವಲ್ಲಿ ಮುಂದಾಗಿರಿ" ಎಂದು ಕಾಂ. ಇ.ಎಂ.ಎಸ್. ಪ್ರತಿನಿಧಿಗಳಿಗೆ ಕರೆ ನೀಡಿದರು.

ದುಡಿಯುವ ವರ್ಗದ ಏಳಿಗೆಗಾಗಿ ನಮ್ಮ ಹೋರಾಟ

ದೇಶದ ರೈತ-ಕಾರ್ಮಿಕರು, ಕೃಷಿಕೂಲಿಕಾರರು, ಜನಸಾಮಾನ್ಯರ ಏಳಿಗೆಗೆ ನಮ್ಮ ಪಕ್ಷ ಕಂಕಣಬದ್ಧವಾಗಿದೆ ಎಂದು ಕಾಂ. ಇ.ಎಂ.ಎಸ್. ತಿಳಿಸಿದರು.

ಪಕ್ಷದ ರಾಜ್ಯಸಮ್ಮೇಳನದ ಅಂಗವಾಗಿ ಡಿ. 14ರಂದು ಮಂಗಳೂರಿನಲ್ಲಿ ನಡೆದ ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಇ.ಎಂ.ಎಸ್. ಮಾತನಾಡುತ್ತಿದ್ದರು.

ಜನತೆಯ ಆಶೋತ್ತರಗಳನ್ನು ಕಡೆಗಣಿಸಿ ಐ.ಎಂ.ಎಫ್. ಸಾಲಕ್ಕೋಸ್ಕರ ದೇಶಗೌರವವನ್ನು ಅಡವಿಟ್ಟು ಜನತೆಯನ್ನು ಅವಮಾನಗೊಳಿಸಲಾಗಿದೆ ಎಂದ ಕಾಂ. ಇ.ಎಂ.ಎಸ್. ದೇಶದ ಸಾರ್ವಭೌಮತೆ, ಐಕ್ಯತೆ ಮತ್ತು ಸ್ವಾತಂತ್ರ್ಯದ ರಕ್ಷಣೆಗಾಗಿ ಜ. 19ರಂದು ನಡೆಯಲಿರುವ ಸಾರ್ವತ್ರಿಕ ಮುಷ್ಕರವನ್ನು ಜನತೆ ಬೆಂಬಲಿಸಬೇಕೆಂದು ವಿನಂತಿಸಿಕೊಂಡರು.

ವಿರೋಧಿ ಪಕ್ಷಗಳ ಏಕತೆಗೆ ಜನತಾ ಅಧ್ಯಕ್ಷ ಚಂದ್ರಶೇಖರ ಕರೆ ನೀಡಿ ಈ ದಿಸೆಯಲ್ಲಿ ಪ್ರಯತ್ನಿಸಲು ನಿರ್ಧರಿಸಿದ್ದನ್ನು ಪ್ರಸ್ತಾಪಿಸಿದ ಇ.ಎಂ.ಎಸ್.ರು ನಮ್ಮ ಸಹಕಾರ ಕೇಳಿದರೆ ನಾವೂ ಸಂತೋಷದಿಂದ ಸಹಕರಿಸುತ್ತೇವೆ. ಜನತಾಪಕ್ಷದೊಂದಿಗೆ ನಮ್ಮ ತಾತ್ವಿಕ ಭಿನ್ನಾಭಿಪ್ರಾಯವಿದ್ದಾಗ್ಯೂ ಹಿಂದೆಯೂ ನಾವು ಅವರನ್ನು ಬೆಂಬಲಿಸಿದ್ದೆವು. ಆದರೆ ತನ್ನದೇ ಆದ ಸಿದ್ಧಾಂತ, ಧೋರಣೆ, ಕಾರ್ಯಕ್ರಮಗಳನ್ನು ಹೊಂದಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅದನ್ನೆಲ್ಲ ಕೈಬಿಟ್ಟು ಪಕ್ಷವನ್ನು ವಿಸರ್ಜಿಸಿ ಅವರೊಡನೆ ವಿಲೀನವಾಗಬೇಕೆಂದರೆ ಅದು ಆಗದ ಮಾತು ಎಂದು ಇ.ಎಂ.ಎಸ್. ನುಡಿದರು.

ಮಾರ್ಕ್ಸಿಸ್ಟರು ನಮಗೆ ದ್ರೋಹ ಮಾಡಿದರು ಎಂದು ಜನತಾಪಕ್ಷ ಪ್ರಲಾಪಿಸುತ್ತಿರುವುದನ್ನು ಖಂಡಿಸಿದ ಇ.ಎಂ.ಎಸ್.ರು "ಜನತಾಪಕ್ಷಕ್ಕೆ ಬೇಷರತ್ ಬೆಂಬಲ ನೀಡುತ್ತೇವೆಂದು ನಾವು ಮಾತು ಕೊಟ್ಟಿರಲಿಲ್ಲ. ಜನತಾ ಅಧಿಕಾರಕ್ಕೆ ಬಂದಾಗ ಇಂದಿರಾ ಸರಕಾರದ ಜನವಿರೋಧಿ ಧೋರಣೆಯನ್ನೇ ಅನುಸರಿಸಿತು. ಜನತಾ ಪಕ್ಷದ ವೈಫಲ್ಯಕ್ಕೆ ಇದೇ ಕಾರಣ" ಎಂದರು. ತಮ್ಮ ವೈಫಲ್ಯಕ್ಕೆ ಕಾರಣ ಹುಡುಕದೇ ನಮ್ಮನ್ನು ದೂಷಿಸುತ್ತಿರುವುದನ್ನು ಖಂಡಿಸಿದರು.

ದೇಶದ ರೈತ-ಕಾರ್ಮಿಕರ, ಜನಸಾಮಾನ್ಯರ ಹಿತರಕ್ಷಣೆಗೆ ನಡೆಯುವ ಹೋರಾಟಗಳನ್ನು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಂಬಲಿಸಿ ಪರ್ಯಾಯ ವ್ಯವಸ್ಥೆಗೆ ಶ್ರಮಿಸಲು ಕಾಂ. ಇ.ಎಂ.ಎಸ್. ಕರೆನೀಡಿದರು.

—ಇ.ಎಂ.ಎಸ್.

ಸರದಿ ಅನ್ನಸತ್ಯಾಗ್ರಹ

ದ.ಕ. ಜಿಲ್ಲೆಯ ಉಪ್ಪಿನಂಗಡಿಯಲ್ಲಿ ಸರಕಾರಿ ಕಿರಿಯ ಕಾಲೇಜಿನ ಅವ್ಯವಸ್ಥೆ ಕುರಿತು ಐಕ್ಯರಂಗದಲ್ಲಿ ವರದಿ ಹಿಂದೆ ಪ್ರಕಟವಾಗಿದೆ.

ಕಳೆದ 2-3 ವರ್ಷಗಳಿಂದ ಅಧ್ಯಾಪಕರ ಕೊರತೆಯಿಂದ ವಿದ್ಯಾರ್ಥಿಗಳು ಬಳಲುತ್ತಿದ್ದು ಮುಖ್ಯವಾಗಿ ಕಾಲೇಜಿಗೆ ಪ್ರಾಂಶುಪಾಲರೇ ಇಲ್ಲ. ಹೈಸ್ಕೂಲು ವಿಭಾಗದಲ್ಲೂ ವಿಜ್ಞಾನ, ಗಣಿತ, ಸಮಾಜ ಅಧ್ಯಾಪಕರುಗಳೂ ನೇಮಕಾತಿಯಾಗಿಲ್ಲ.

ಈ ಅವ್ಯವಸ್ಥೆ ಪ್ರತಿಭಟಿಸಿ 16-9-81ರಂದು ವಿದ್ಯಾರ್ಥಿಗಳು ಬೇಡಿಕೆದಿನ ಆಚರಿಸಿದ್ದರು. ಯಾವುದೇ ಕ್ರಮ ಕೈಗೊಳ್ಳದ ಕಾರಣ 3-12-81ರಿಂದ ಸರದಿ ಅನ್ನಸತ್ಯಾಗ್ರಹ ಪ್ರಾರಂಭವಾಗಿದೆ.

ಈ ಹೋರಾಟಕ್ಕೆ ಬೆಂಬಲಿಸಬೇಕೆಂದು ಸಾರ್ವಜನಿಕರನ್ನು ವಿದ್ಯಾರ್ಥಿ ಹೋರಾಟ ಸಮಿತಿಯ ಅಧ್ಯಕ್ಷ ಡಿ. ಎಸ್. ಸದಾನಂದ, ಕಾರ್ಯದರ್ಶಿ ಯು. ಎಂ. ಅಶ್ರಫ್ ಮತ್ತು ಖಜಾಂಚಿ ಸಿ. ಕೆ. ಸೈಮನ್ ವಿನಂತಿಸಿಕೊಂಡಿದ್ದಾರೆ.

ಲಾಠೀ ಪ್ರಹಾರದ ಖಂಡನೆ

21-12-81ರ ಬೆಳಿಗ್ಗೆ ಬಿನ್ನಿ ಮಿಲ್ ಕಾರ್ಮಿಕರ ಮೇಲೆ ಲಾಠೀ ಪ್ರಹಾರ ಮಾಡಿದ್ದನ್ನು ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಕಾನೂನುಬದ್ಧ ಟ್ರೇಡ್‌ಯೂನಿಯನ್ ಚಟುವಟಿಕೆಗಳ ಮೂಲಕ ತಮ್ಮ ಬೇಡಿಕೆಗಳ ಈಡೇರಿಕೆಗೆ ಪ್ರಯತ್ನಿಸುತ್ತಿರುವ ಕಾರ್ಮಿಕರು ಮತ್ತು ಅವರ ನಾಯಕರ ಮೇಲೆ ಪೋಲೀಸರು ನಿರ್ದಯವಾಗಿ ದಬ್ಬಾಳಿಕೆ ನಡೆಸುವುದು ಹಾಗೂ ಅವರನ್ನು ಬಂಧಿಸುವುದು ಖಂಡನೀಯ. ಈ ಕುರಿತು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ.ಅನಂತ ರಾಮ್ ಹೇಳಿಕೆಯೊಂದನ್ನು ಹೊರಡಿಸಿದ್ದಾರೆ. ಹೇಳಿಕೆಯ ಪೂರ್ತಿಪಾಠ ಇಂತಿದೆ:

"23-11-81ರ ಒಪ್ಪಂದದ ಪರಿಣಾಮವಾಗಿ ಹೆಚ್ಚಿರುವ ಶ್ರಮಭಾರವನ್ನು ಪ್ರತಿಭಟಿಸಿ ಮೂರು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಅಂದರೆ ಬಹುಸಂಖ್ಯಾತ ಕಾರ್ಮಿಕರು ತಮ್ಮ ಸಲಕರಣೆಗಳನ್ನು ಕೆಳಗಿಟ್ಟು ಮುಷ್ಕರ ನಡೆಸುತ್ತಿದ್ದಾರೆಂದರೆ ಅದು ಡಿ. ವೆಂಕಟೇಶ್ ಮಾಡಿಕೊಂಡ ಒಪ್ಪಂದದ ಪೊಳ್ಳುತನ ಸಾರುತ್ತದಷ್ಟೇ."

"ಇದು ಬಿನ್ನಿ ಮಿಲ್‌ನಲ್ಲಿ ತನ್ನ ಈ ಏಕಪಕ್ಷೀಯ ಹಾಗೂ ಅನೈತಿಕ ಒಪ್ಪಂದದ ಮೂಲಕ ಡಿ. ವೆಂಕಟೇಶ್ ಅವರು ಬಿನ್ನಿ ಮಿಲ್ ಕಾರ್ಮಿಕರು ಮಾತ್ರವಲ್ಲ ಸಮಸ್ತ ಜವಳೀ ಕೈಗಾರಿಕೆಯ ಕಾರ್ಮಿಕರಿಗೇ ಮಾಡಿರುವ ವಿಶ್ವಾಸಘಾತವನ್ನು ಬಯಲುಮಾಡಿದೆ. ಬಿನ್ನಿ ಕಾರ್ಮಿಕರು ದೀರ್ಘ ಹಾಗೂ ಪ್ರಬಲ ಹೋರಾಟವನ್ನು ನಡೆಸಿದ್ದಾರೆ ಹಾಗೂ ಡಿ. ವೆಂಕಟೇಶ್ ಮಾಡಿಕೊಂಡ ಒಪ್ಪಂದವನ್ನು ಸಾರಾಸಗಟಾಗಿ ತಿರಸ್ಕರಿಸಲಿದ್ದಾರೆ ಎಂಬುದನ್ನು ಈ ಘಟನೆ ಎತ್ತಿತೋರಿಸುತ್ತದೆ."

"ಈ ಅಪವಿತ್ರ ಒಪ್ಪಂದವನ್ನು ರದ್ದು ಮಾಡಬೇಕೆಂದೂ ಹಾಗೂ ಬಂಧಿಸಲ್ಪಟ್ಟ ಕಾರ್ಮಿಕ ನಾಯಕರನ್ನು ಕೂಡಲೇ ಬಿಡುಗಡೆಮಾಡಬೇಕೆಂದೂ ಸಿ.ಐ.ಟಿ.ಯು. ಒತ್ತಾಯಿಸುತ್ತದೆ."

"ರಾಜ್ಯಸರಕಾರ ತಕ್ಷಣ ಮಧ್ಯಪ್ರವೇಶಿಸಿ ಕೈಗಾರಿಕಾ ಶಾಂತಿ ಹಾಗೂ ಸೌಹಾರ್ದದ ದೃಷ್ಟಿಯಿಂದ ವಿವಾದವನ್ನು ಹಾಗೂ ಕಾರ್ಮಿಕ ಅಶಾಂತಿಯನ್ನು ಬಗೆಹರಿಸಬೇಕೆಂದು ಸಿ.ಐ.ಟಿ.ಯು. ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತದೆ."

ಪಕ್ಷದ ಖಂಡನೆ

ಬಿನ್ನಿ ಮಿಲ್ ಕಾರ್ಮಿಕರ ಮೇಲೆ ನಡೆದಿರುವ ಲಾಠೀ ಪ್ರಹಾರ ಮತ್ತು ಕಾರ್ಮಿಕರ ಬಂಧನದ ಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಉಗ್ರವಾಗಿ ಖಂಡಿಸಿದೆ. ಈ ಕುರಿತು ಪಕ್ಷದ ಸೆಕ್ರೆಟಾರಿಯೇಟ್ ಪರವಾಗಿ ಕಾಂ. ಎಂ. ಕೆ. ಭಟ್ ಹೇಳಿಕೆಯೊಂದನ್ನು ಹೊರಡಿಸಿ ಲಾಠೀ ಪ್ರಹಾರವನ್ನು ಖಂಡಿಸಿದ್ದಾರೆ.

ಸೌಹಾರ್ದ ಸಮಿತಿ ಸಭೆ

ದಿನಾಂಕ 19-12-81ರಂದು ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಬಿನ್ನಿಮಿಲ್ ಕಾರ್ಮಿಕರ ಸೌಹಾರ್ದ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಬಿನ್ನಿಮಿಲ್ ಸ್ಟಾಫ್ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಂ. ಕೆ. ಎಸ್. ಸುಬ್ರಮಣ್ಯಂ, ಹತ್ತಿಗಿರಣಿ ಕಾರ್ಮಿಕ ನಾಯಕ ಕೆ. ಶ್ರೀರಾಮುಲು, ಸಿ.ಐ.ಟಿ.ಯು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್, ಶಾಸಕ ಮೈಕಲ್ ಫರ್ನಾಂಡಿಸ್, ಎಲ್ಲೈಸಿಯ ಕಾಂ.ಲಕ್ಷ್ಮೀನಾರಾಯಣ ಮೊದಲಾದವರು ಮಾತನಾಡಿ ಡಿ. ವೆಂಕಟೇಶ್ ಮಾಡಿಕೊಂಡ ಒಪ್ಪಂದವನ್ನು ಕಟುವಾಗಿ ಖಂಡಿಸಿ ಹೋರಾಟ ಮುಂದುವರೆಸಲು ಕರೆ ನೀಡಿದರು.

○

ಎಸ್. ಎಫ್. ಐ. ಘಟಕ ಪ್ರಾರಂಭ

12-12-81 ರಂದು ಎಸ್. ಎಫ್. ಐ. ನೇತೃತ್ವದಲ್ಲಿ ಉಡುಪಿಯ ಸರಕಾರಿ ಜೂನಿಯರ್ ಕಾಲೇಜು ಘಟಕ ಪ್ರಾರಂಭಿಸಲಾಯಿತು.

ಘಟಕದ ಪ್ರಾರಂಭೋತ್ಸವದ ಸಂದರ್ಭದಲ್ಲಿ ಎಸ್.ಎಫ್.ಐ.ನ ದ.ಕ. ಜಿಲ್ಲಾ ಸಮಿತಿಯ ಸಹಕಾರ್ಯದರ್ಶಿ ಎಂ.ಜಗನ್ನಾಥರೈಯವರು ಮಾತನಾಡಿ ಎಸ್.ಎಫ್.ಐ.ನ ಧ್ಯೇಯಧೋರಣೆಗಳ ಕುರಿತು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್.ಎಫ್.ಐ. ರಾಜ್ಯಸಮಿತಿ ಉಪಾಧ್ಯಕ್ಷ ಕುಂದ್ರಪ್ಪ ಕಾಯಿಯವರು ಮಾತನಾಡಿ ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಕರೆ ನೀಡಿದರು. ಸಭೆಯನ್ನುದ್ದೇಶಿಸಿ ಉಡುಪಿ ತಾಲ್ಲೂಕು ಸಮಿತಿ ಅಧ್ಯಕ್ಷ ಸದಾನಂದಶೆಟ್ಟಿ, ಕಾರ್ಯದರ್ಶಿ ಮದನ ಮೋಹನ್ ನಾಯಕ್ ಮೊದಲಾದವರು ಮಾತನಾಡಿದರು.

ಸಭೆಯಲ್ಲಿ, ಶುಲ್ಕವಿನಾಯಿತಿಯನ್ನು ತಿರಸ್ಕರಿಸಿದ ಕ್ರಮದ ಬಗ್ಗೆ ಸರಕಾರಿ ಜ್ಯೂನಿಯರ್ ಕಾಲೇಜಿನ ವಿದ್ಯಾರ್ಥಿಗಳು ಹೋರಾಟ ಹೂಡಲು ನಿರ್ಧರಿಸಿದರು.

ನಂತರ ಹೊಸದಾಗಿ ರಚಿತವಾದ ಎಸ್. ಎಫ್. ಐ. ಘಟಕಕ್ಕೆ 16 ಜನರ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

○

ರಾಜ್ಯ ಸರಕಾರಿ ನೌಕರರು ಮುಷ್ಕರದ ಹಾದಿಯಲ್ಲಿ

ಬೆಂಗಳೂರಿನಲ್ಲಿ ಬೃಹತ್ ಬಹಿರಂಗ ಸಭೆ

ಕರ್ನಾಟಕ ಸರಕಾರವು ತಮ್ಮ ಬೇಡಿಕೆಗಳನ್ನು ಈಡೇರಿಸಲು ವಿಫಲವಾದುದರಿಂದ ಸುಮಾರು ನಾಲ್ಕು ಲಕ್ಷ ರಾಜ್ಯಸರಕಾರಿ ನೌಕರರು ಜನವರಿ 6ರ ಮಧ್ಯರಾತ್ರಿಯಿಂದ ಅನಿರ್ದಿಷ್ಟಕಾಲ ಮುಷ್ಕರ ಹೂಡಲು ತೀರ್ಮಾನಿಸಿದ್ದಾರೆ.

ಅಖಿಲಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ರಾಷ್ಟ್ರೀಯ ಸಮಿತಿಯು ಡಿಸೆಂಬರ್ 18 ಮತ್ತು 19ರಂದು ಬೆಂಗಳೂರಲ್ಲಿ ಸಭೆ ಸೇರಿತು. ಈ ಹಿನ್ನೆಲೆಯಲ್ಲಿ ದಿನಾಂಕ 18 ರಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಸರಕಾರಿ ನೌಕರರ ಬೃಹತ್ ಸಭೆಯನ್ನು ಏರ್ಪಡಿಸಲಾಗಿತ್ತು.

ರಾಜ್ಯಸರಕಾರಿ ನೌಕರರ ಒಕ್ಕೂಟದ ಕಾರ್ಯದರ್ಶಿ ಕಾಂ. ಸುಕುಮಲ್ ಸೇನ್ (ಪಶ್ಚಿಮ ಬಂಗಾಳ) ರವರು ಒಕ್ಕೂಟದ ಕಾರ್ಯಕಲಾಪಗಳನ್ನು ವಿವರಿಸಿ, ಮುಷ್ಕರಕ್ಕೆ ಸಿದ್ಧರಾಗುತ್ತಿರುವ ಕರ್ನಾಟಕದ ನೌಕರರನ್ನು ಅಭಿನಂದಿಸಿದರು. ದೀರ್ಘಕಾಲದ ಹೋರಾಟಕ್ಕೆ ಸಿದ್ಧರಾಗುವಂತೆ ಕಾಂ. ಇ. ಪದ್ಮನಾಭನ್ (ಕೇರಳ)ರವರು ಕರೆಯಿತ್ತರು. ತಮ್ಮ ನೌಕರರ ಬೇಡಿಕೆಗಳನ್ನು ಈಡೇರಿಸುವಲ್ಲಿ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳು ಪರಸ್ಪರ ವಿಚಾರ ವಿನಿಮಯ ನಡೆಸುವುದು ಅಗತ್ಯವೆಂದು ಒಕ್ಕೂಟದ ಗೌರವ ,ಅಧ್ಯಕ್ಷ ಕಾಂ. ಎ. ಶ್ರೀರಾಮುಲು (ಆಂಧ್ರಪ್ರದೇಶ) ಅಭಿಪ್ರಾಯಪಟ್ಟರು. ಎಂ.ಜಿ.ಆರ್. ರಾಜ್ಯದ ನೌಕರರು ಹೋರಾಟದ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಂಡಂತೆ, ಆರ್.ಜಿ.ಆರ್. ರಾಜ್ಯದ ನೌಕರರು ಹೋರಾಟದ ಮೂಲಕ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳಬೇಕೆಂದು ಕಾಂ.ಅಪ್ಪನ್ (ತಮಿಳುನಾಡ್) ತಿಳಿಸಿದರು. ಕಾರ್ಮಿಕ ಚಳುವಳಿಗಳನ್ನು ಹತ್ತಿಕ್ಕಲು ಸರಕಾರವು ರಾಷ್ಟ್ರೀಯ ರಕ್ಷಣಾ ಕಾಯಿದೆ ಮತ್ತು ಅಗತ್ಯ ಸೇವಾ ನಿಯಂತ್ರಣಾ ಕಾಯಿದೆಗಳನ್ನು ಬಳಸುತ್ತಿರುವುದಾಗಿ ಕಾಂ. ಅಜಯ್ ಬಿಸ್ವಾಸ್ ಎಂ. ಪಿ. (ತ್ರಿಪುರಾ) ದೂರಿದರು. ಬಿಹಾರದ 6 ಲಕ್ಷ ಸರಕಾರಿ ನೌಕರರ ದಿಟ್ಟ ಹೋರಾಟವನ್ನು ಪ್ರಶಂಸಿಸಿದ ಒಕ್ಕೂಟದ ಪ್ರಧಾನಕಾರ್ಯದರ್ಶಿ ಕಾಂ. ಅರವಿಂದ ಘೋಷ್,ಎಂ.ಪಿ (ಪಶ್ಚಿಮ ಬಂಗಾಳ) ಕೇಂದ್ರಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ವಿರೋಧಿಸಲು, ಜನವರಿ 19ರಂದು ನಡೆಯಲಿರುವ ಅಖಿಲಭಾರತ ಮುಷ್ಕರದಲ್ಲಿ ರಾಷ್ಟ್ರದ 40 ಲಕ್ಷ ರಾಜ್ಯಸರಕಾರಿ ನೌಕರರು ಪಾಲ್ಗೊಳ್ಳುವರು ಎಂದು ಪ್ರಕಟಿಸಿದರು. ನೌಕರರು ಮುಷ್ಕರ ಹೂಡುವಂತಹ ಪರಿಸ್ಥಿತಿಯನ್ನು ನಿರ್ಮಿಸುವಲ್ಲಿ ಆಡಳಿತ ಪಕ್ಷದಷ್ಟೇ ವಿರೋಧ ಪಕ್ಷಗಳೂ ಕಾರಣರೆಂದು ಒಕ್ಕೂಟದ ಅಧ್ಯಕ್ಷ ಕಾಂ. ಪಿ. ಎನ್. ಸುಕುಲ್, ಎಂ. ಪಿ. (ಉತ್ತರ ಪ್ರದೇಶ) ಅಭಿಪ್ರಾಯಪಟ್ಟರು. ಜನವರಿ 6 ಮತ್ತು 19ರಂದು ಏನು ಮಾಡುತ್ತೀರಿ ಎಂದು ಕಾಂ. ಶರ್ಮಾ (ರಾಜಸ್ಥಾನ) ಅವರು ಸಭಿಕರನ್ನು ಪ್ರಶ್ನಿಸಿದಾಗ "ಮುಷ್ಕರ ಮಾಡುತ್ತೇವೆ" ಎಂಬ ಘೋಷಣೆ ಮೊಳಗಿತು.

1967ರ ನಂತರ ಪ್ರಥಮ ಬಾರಿಗೆ ಸೇರಿದ ಈ ಪ್ರಚಂಡ ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ. ವಿ. ಕೇಶವಮೂರ್ತಿ ವಹಿಸಿದ್ದರು. ಜನವರಿ 6 ಮತ್ತು 19ರಂದು ನಡೆಯಲಿರುವ ಮುಷ್ಕರಗಳನ್ನು ಯಶಸ್ವಿಗೊಳಿಸುವುದಾಗಿ ಸಭೆಯಲ್ಲಿ ಪ್ರತಿಜ್ಞೆ ಸ್ವೀಕರಿಸಲಾಯಿತು. ಶಿಕ್ಷಕರ ಸಂಘದ ಅಧ್ಯಕ್ಷ ಕಾಂ. ಚನ್ನಬಸವಯ್ಯ, ಎಂ.ಎಲ್.ಸಿ. ಮಿನಿಸ್ಟೀರಿಯಲ್ ನೌಕರರ ಸಂಘದ ಅಧ್ಯಕ್ಷೆ ಕಾಂ. ಎ. ಪಾರ್ವತಿ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದರು. ಕಾಂ. ಪಿ. ಎಸ್. ಶ್ರೀಪತಿ ಮತ್ತು ಸಂಗಡಿಗರು ಕ್ರಾಂತಿಗೀತೆ ಹಾಡಿದರು. ಕಾಂ. ಟಿ. ವಿ. ರಾಘವನ್ ಸ್ವಾಗತಿಸಿದರು. ಕೊನೆಯಲ್ಲಿ ನಾಲ್ಕನೆ ದರ್ಜೆ ನೌಕರರ ಸಂಘದ ಅಧ್ಯಕ್ಷ ಕಾಂ. ಜೆ. ರಾಮಸಿಂಗ್ ವಂದಿಸಿದರು.

●

ಜನವರಿ 19ರ

ಮುಷ್ಕರವನ್ನು

ಯಶಸ್ವಿಗೊಳಿಸಿ

ಸಾದರ ಸ್ವೀಕಾರ

1. ಅದೃಷ್ಟ (ಅಮೇರಿಕ-ಕೆನಡ-ಮೆಕ್ಸಿಕೊ ದೇಶಗಳ ಕಥೆಗಳು); ವಿಶ್ವಕಥಾಕೋಶದ 13ನೇ ಸಂಪುಟ; ಅನು : ವೀಣಾಶಾಂತೇಶ್ವರ; ಪ್ರಕಾಶನ : ನವಕರ್ನಾಟಕ ಸಂಸ್ಥೆ; ಪ್ರಧಾನ ಸಂಪಾದಕ : ನಿರಂಜನ; ಬೆಲೆ : 10 ರೂ. ಪುಟಗಳು : 172.

2. ಸಜ್ಜನನ ಸಾವು (ಐಸ್‌ಲೆಂಡ್-ಡೆನ್‌ಮಾರ್ಕ್-ನಾರ್ವೆ-ಸ್ವೀಡನ್ ಮತ್ತು ಫಿನ್‌ಲೆಂಡ್ ದೇಶಗಳ ಕಥೆಗಳು); ವಿಶ್ವಕಥಾಕೋಶದ 14ನೇ ಸಂಪುಟ; ಅನು : ಕ. ನಂ. ನಾಗರಾಜ್; ಪ್ರಕಾಶನ : ನವಕರ್ನಾಟಕ ಸಂಸ್ಥೆ; ಪ್ರಧಾನ ಸಂಪಾದಕ : ನಿರಂಜನ; ಬೆಲೆ : 10 ರೂ; ಪುಟಗಳು : 166.

3. ಡೇಗೆ ಹಕ್ಕಿ (ಇಟಲಿ-ಆಸ್ಟ್ರಿಯ ಕಥೆಗಳು) ವಿಶ್ವಕಥಾಕೋಶದ 15ನೇ ಸಂಪುಟ; ಪ್ರಕಾಶನ : ನವಕರ್ನಾಟಕ ಸಂಸ್ಥೆ; ಅನು : ಎಸ್. ಅನಂತನಾರಾಯಣ; ಪ್ರಧಾನ ಸಂಪಾದಕ : ನಿರಂಜನ; ಬೆಲೆ : 10 ರೂ; ಪುಟಗಳು : 189.

4. ಅವಸಾನ (ಗ್ರೀಸ್-ಸೈಪ್ರಸ್-ಟರ್ಕಿ ದೇಶಗಳ ಕಥೆಗಳು); ವಿಶ್ವಕಥಾಕೋಶದ 16ನೇ ಸಂಪುಟ; ಪ್ರಕಾಶನ : ನವಕರ್ನಾಟಕ ಸಂಸ್ಥೆ; ಪ್ರಧಾನ ಸಂಪಾದಕ : ನಿರಂಜನ; ಬೆಲೆ : 10 ರೂ; ಪುಟಗಳು : 141.

ಈ ಮೇಲ್ಕಾಣಿಸಿದ ಪುಸ್ತಕಗಳ ಕುರಿತು ವಿಮರ್ಶೆಯನ್ನು ಕಾಲಾನುಕ್ರಮದಲ್ಲಿ ಪ್ರಕಟಿಸಲಾಗುವುದು.

ಗೊಡ್ಡು ಸಂಪ್ರದಾಯಕ್ಕೆ ಸವಾಲಾದ ವಿಧವಾ ವಿವಾಹ

ಮದುವೆ ಎಂದೊಡನೆ ನೆನಪಿಗೆ ಬರುವುದು ಆಡಂಬರದ ಪ್ರದರ್ಶನ ತಳಿರು ತೋರಣಗಳಿಂದ ಅಲಂಕೃತವಾದ ಚಪ್ಪರ, ವಾದ್ಯಸಂಗೀತ, ಮತ್ತು ನೆಂಟರಿಸ್ಟರ ದಂಡು. ಇವು ಯಾವೂ ಇಲ್ಲದೆ ಮದುವೆಯಾಗಿ ದಂಪತಿಗಳಾದರು ದ.ಸಂ.ಸ. ಬೆಂಗಳೂರು ಸಂಚಾಲಕ ಶ್ರೀ ಎಂ. ವೆಂಕಟಸ್ವಾಮಿ ಮತ್ತು ದ.ಸಂ.ಸ. ಕೋಲಾರ ಕಾರ್ಯಕರ್ತೆ ರತ್ನ.

ಕೋಲಾರದಲ್ಲಿ ನಡೆದ ಡಾ॥ ಬಿ. ಆರ್. ಅಂಬೇಡ್ಕರ್ ಪುಣ್ಯತಿಥಿ ಆಚರಣೆಯ ಸಪ್ತಾಹ ಮುಕ್ತಾಯ ಸಮಾರಂಭದಲ್ಲಿ ವೆಂಕಟಸ್ವಾಮಿ ಮತ್ತು ರತ್ನ ಕೇವಲ ಪರಸ್ಪರ ಹೂವಿನಹಾರವನ್ನ ಬದಲಾವಣೆ ಮಾಡಿಕೊಳ್ಳುವುದರ ಮೂಲಕ ದಂಪತಿಗಳಾದರು.

ಸಭೆಯಲ್ಲಿ ದಲಿತ ಕವಿ ಶ್ರೀ ಸಿದ್ಧಲಿಂಗಯ್ಯನವರು, ಗೊಡ್ಡು ಸಂಪ್ರದಾಯಕ್ಕೆ ತಿಲಾಂಜಲಿಯಿಟ್ಟು ವಿಧವೆಗೊಂದು ಹೊಸ ಜೀವನ ಕೊಟ್ಟ ವೆಂಕಟಸ್ವಾಮಿಯವರನ್ನ ಅಭಿನಂದಿಸಿ ಮಾತನಾಡುತ್ತಾ ಹೆಂಡತಿ ಸತ್ತರೆ ಇನ್ನೊಂದು ಮದುವೆಯಾಗಿ ಸಂಸಾರ ಸಾಗಿಸಲು ಅವಕಾಶವಿರುವ ಈ ದೇಶದಲ್ಲಿ ಗಂಡ ಸತ್ತರೆ ಹೆಣ್ಣು ಜೀವನ ಪರ್ಯಂತ ವಿಧವೆಯಾಗಿರಬೇಕಾಗುತ್ತದೆ. ಮುಂದೆ ಆಕೆ ಯಾರನ್ನೂ ಮದುವೆಯಾಗದಂತೆ ಆಕೆಯ ತಲೆ ಬೋಳಿಸಿ ಕುರೂಪಿಯಾಗಿ ಮಾಡಿಬಿಡುತ್ತಾರೆ. ಈ ದೇಶದಲ್ಲಿ ಹೆಣ್ಣಿಗೆ ಕೊಡುವ ಪೂಜ್ಯ ಸ್ಥಾನ ಇದು ಎಂದು ವ್ಯಂಗ್ಯ ಮಾಡಿದರು.

ಈ ದೇಶದಲ್ಲಿ ಪ್ರೀತಿಸುವುದಕ್ಕೂ ಕಟ್ಟಳೆಗಳು. ಒಬ್ಬ ಯುವಕ ಪ್ರೀತಿಸಬೇಕಾದರೆ ಅವನ ಜಾತಿಯ ಯುವತಿಯನ್ನೇ ಪ್ರೀತಿಸಬೇಕು. ಯುವಕ-ಯುವತಿಯರ ವೈಯುಕ್ತಿಕ ಜೀವನದಲ್ಲಿ ಪ್ರವೇಶಿಸಲು ಬೆಂಬಲಿಸುವವರಿಗಷ್ಟೇ. ಹಕ್ಕುಇಟ್ಟು. ಜಾತಿ ಕಟ್ಟಳೆಗಳನ್ನು ಹೊಡೆಯುವ ಮುಖ್ಯ ಸಾಧನವಾದ ಅಂತರ್ಜಾತಿ ವಿವಾಹಗಳು ಹೆಚ್ಚು ನಡೆಯಬೇಕು. ಕೆಳಜಾತಿಯ ಯುವಕರು ಮೇಲ್ಜಾತಿಯ ಯುವತಿಯನ್ನು ಮದುವೆಯಾಗುವುದಷ್ಟೇ ಅಂತರ್ಜಾತಿಯ ವಿವಾಹವಾಗಲಾರದು. ಕೆಳಜಾತಿಯ ಯುವತಿಯರನ್ನು ಮದುವೆಯಾಗಲು ಮೇಲ್ಜಾತಿಯ ಯುವಕರೂ ಮುಂದೆ ಬಂದಾಗ ಮಾತ್ರ ಅಂತರ್ಜಾತಿಯ ವಿವಾಹಕ್ಕೆ ಅರ್ಥ ಬರುತ್ತದೆ ಎಂದರು.

ಸಭೆಯಲ್ಲಿ ಹನುಮಂತಯ್ಯನವರು ಮಾತನಾಡುತ್ತಾ ಇತ್ತೀಚಿಗಿನ ಆಚರಣೆಗಳು ಅರ್ಥವನ್ನು ಕಳೆದುಕೊಂಡಿವೆ. ಮದುವೆ ಸಮಾರಂಭಗಳು ಆಡಂಬರದ ಪ್ರದರ್ಶನಗಳಾಗಿವೆ. ವರದಕ್ಷಿಣೆಯ ಪಿಡುಗಿಗೆ ಮುಗ್ಧ ಹೆಣ್ಣು ಮಕ್ಕಳು ಆಹುತಿಯಾಗುತ್ತಿದ್ದಾರೆ. ಮದುವೆಗಾಗಿ ಮುತ್ತಾತ ಮಾಡಿದ ಸಾಲವನ್ನು ಮೊಮ್ಮಕ್ಕಳು ಜಮೀನ್ದಾರನ ಮನೆಯಲ್ಲಿ ಜೀತಮಾಡಿ ತೀರಿಸಬೇಕಾಗಿದೆ. ಇಂತಹ ಅರ್ಥವಿಲ್ಲದ ಆಡಂಬರ ಆಚರಣೆಗಳನ್ನೆಲ್ಲ ಮೆಟ್ಟಿ ಇಂದಿನ ಯುವಕರು ಮುಂದೆ ಬರಬೇಕಾಗಿದೆ ಎಂದರು.

ಸಭೆಗೆ ಕೋಲಾರ ಜಿಲ್ಲಾಧಿಕಾರಿ ಬಸವಯ್ಯನವರು ಆಗಮಿಸಿ ನೂತನ ವಧೂವರರನ್ನು ಅಭಿನಂದಿಸಿದರು. ಕೋಲಾರ ದ.ಸಂ.ಸ. ಕಾರ್ಯಕರ್ತೆ ಕುಸುಮ ಈ ಸಂದರ್ಭದಲ್ಲಿ ಮಾತನಾಡಿದರು. ಅಧ್ಯಕ್ಷತೆಯನ್ನು ದ.ಸಂ.ಸ. ರಾಜ್ಯ ಸಂಚಾಲಕ ಎಂ. ಡಿ. ಗಂಗಯ್ಯ ವಹಿಸಿದ್ದರು.

ಸಮ್ಮೇಳನದ ಕೆಲವು ವೈಶಿಷ್ಟ್ಯಗಳು

* ಸಮ್ಮೇಳನದಲ್ಲಿ ಭಾಗವಹಿಸಿದ್ದ ಸದಸ್ಯರು ಒಟ್ಟು 193.
* ಇವರಲ್ಲಿ 38 ಜನ ಪದವೀಧರರು; 71 ಜನ ಪದವಿಪೂರ್ವ ಶಿಕ್ಷಣ ಪಡೆದವರು; ಪ್ರಾಥಮಿಕ (SSLC ವರೆಗೆ) ಶಿಕ್ಷಣ ಪಡೆದವರು 81 ಜನ; ಅನಕ್ಷರಸ್ಥರು 3 ಜನ.
* ಪ್ರತಿನಿಧಿಗಳಾಗಿ ಆಗಮಿಸಿದವರಲ್ಲಿ 42 ಜನ ರೈತಸಂಘದವರು, 90 ಜನ ಟ್ರೇಡ್‌ಯೂನಿಯನ್ ರಂಗದವರು, ಯುವಜನ, ಮಹಿಳೆ, ವಿದ್ಯಾರ್ಥಿ ಮತ್ತು ಇತರ ರಂಗದಲ್ಲಿ ಕೆಲಸಮಾಡುವವರು 41 ಜನರು.
* ಪ್ರತಿನಿಧಿಗಳಲ್ಲಿ ಕಾರ್ಮಿಕ ಮೂಲದಿಂದ ಬಂದವರು 103 ಜನ; ಮಧ್ಯಮವರ್ಗದಿಂದ ಬಂದವರು 55 ಜನ; ಮಧ್ಯಮ ರೈತ ವರ್ಗದಿಂದ ಬಂದವರು 29 ಜನ; ಬಂಡವಾಳದಾರ ಮತ್ತು ಭೂಮಾಲಕ ವರ್ಗದಿಂದ 6 ಜನ.
* 1964ಕ್ಕೆ ಮುಂಚೆ ಪಾರ್ಟಿಗೆ ಸೇರಿದವರು 59 ಜನ; 64-78ರ ಅವಧಿಯಲ್ಲಿ 94 ಜನ ಮತ್ತು 78ರ ನಂತರ ಬಂದವರು 60 ಜನ.
* ಅತ್ಯಂತ ಹಿಂದೆ ಪಾರ್ಟಿಗೆ ಸೇರಿದವರು ಕಾಂ. ಎನ್. ಎಲ್. ಉಪಾಧ್ಯಾಯ (1938)
* ಪ್ರತಿನಿಧಿಗಳಲ್ಲಿ ಅತ್ಯಂತ ಹೆಚ್ಚು ವಯಸ್ಸಿನವರು ಕಾಂ. ಮುಗುದಾಳಪ್ಪ (68 ವರ್ಷ)
* ಅತ್ಯಂತ ಕಡಿಮೆ ವಯಸ್ಸಿನವರು ಸುಳ್ಯದ ಡಿ. ಚೆನ್ನಪ್ಪ (19 ವರ್ಷ)
* ಅತ್ಯಂತ ಹೆಚ್ಚು ಜೈಲು ಶಿಕ್ಷೆ ಅನುಭವಿಸಿದವರು ಕಾಂ. ವಿನ್. ಕೆ. ಉಪಾಧ್ಯಾಯರು. (6 ವರ್ಷ 6 ತಿಂಗಳು)
* ಅತ್ಯಂತ ಹೆಚ್ಚು ಅವಧಿ ಭೂಗತವಾಗಿದ್ದವರು ಕಾಂ. ಎಸ್. ಸೂರ್ಯನಾರಾಯಣರಾವ್ ಅವರು. (4 ವರ್ಷ 6 ತಿಂಗಳು)
* ಪ್ರತಿನಿಧಿಗಳಲ್ಲಿ 20ರಿಂದ 30 ವರ್ಷ ವಯಸ್ಸಿನವರು 60 ಜನ; 31ರಿಂದ 40 ವರ್ಷ ವಯಸ್ಸಿನವರು 30 ಜನ; 41ರಿಂದ 50 ವರ್ಷ ವಯಸ್ಸಿನವರು 25 ಜನ ಮತ್ತು 61ರಿಂದ 70 ವರ್ಷ ವಯಸ್ಸಿನೊಳಗಿನವರು 36 ಜನರಿದ್ದರು.

ಡಿ. ವೈ. ಎಫ್. ಐ. ಚಟುವಟಿಕೆಗಳು

ಸಿಂಧನೂರು

6-12-81ರಂದು ಡಿ. ವೈ. ಎಫ್. ಐ. ಮತ್ತು ವಿಕಾಸ ಯುವಕ ಮಂಡಳಿಗಳ ಜಂಟಿ ಆಶ್ರಯದಲ್ಲಿ "ಪರ್ಯಾಯ ಶಿಕ್ಷಣ ಪದ್ಧತಿಯಿಂದ ನಿರುದ್ಯೋಗ ಸಮಸ್ಯೆಗೆ ಪರಿಹಾರ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ನಡೆಸಲಾಯಿತು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಕನ್ನಡ ಉಪನ್ಯಾಸಕ ಶ್ರೀ ಜಾಲಾಕ್ಷಯ್ಯ ವಹಿಸಿದ್ದರು.

ಶ್ರೀ ಎಚ್. ಆರ್. ಕುಲಕರ್ಣಿ, ವಿಶ್ವನಾಥ, ತುಕಾರಾಮ ಅಯ್ಯಪ್ಪ ಮತ್ತು ವಿಕ್ರಮ ಇವರುಗಳು ಪ್ರಬಂಧ ಮಂಡಿಸಿದರು.

ಪರ್ಯಾಯ ಶಿಕ್ಷಣದಿಂದ ಸ್ವಲ್ಪ ಮಟ್ಟಿಗೆ ನಿರುದ್ಯೋಗ ಸಮಸ್ಯೆ ಪರಿಹರಿಸಲು ಸಾಧ್ಯವೆಂಬ ವಿಚಾರಸಂಕಿರಣದ ಒಟ್ಟಾಭಿಪ್ರಾಯ.

ಚಿಂತಾಮಣಿ

ಜೀವನಾವಶ್ಯಕ ಪದಾರ್ಥಗಳಲ್ಲಿ ವಿಪರೀತ ಕಲಬೆರಕೆಯಾಗುತ್ತಿದ್ದು ನಾಗರಿಕರಿಗೆ ಶುದ್ಧವಾದ ಆಹಾರ ಪದಾರ್ಥಗಳು ದೊರೆಯುತ್ತಿಲ್ಲವಾದ್ದರಿಂದ ಚಿಂತಾಮಣಿಯ ಡಿ. ವೈ. ಎಫ್. ಐ. ಮತ್ತು ಎಸ್. ಎಫ್. ಐ. ಘಟಕಗಳು ಜಂಟಿಯಾಗಿ ಜಿಲ್ಲಾಧಿಕಾರಿಗೆ ಪ್ರತಿಭಟನೆ ಸಲ್ಲಿಸಿದ್ದಾರೆ. ಈ ಕುರಿತು ಹೊರಡಿಸಿದ ಪತ್ರಿಕಾ ಪ್ರಕಟನೆಯಲ್ಲಿ ಆಹಾರ ಕಲಬೆರಕೆಯ ಅನೇಕ ಪ್ರಕರಣಗಳನ್ನು ನಮೂದಿಸಿ ಕೂಡಲೇ ಕಲಬೆರಕೆ ನಿಲ್ಲಿಸುವಂತೆ ಕ್ರಮವಹಿಸಲು ಮುಂದಾಗಬೇಕೆಂದು ಕೋರಿದ್ದಾರೆ.

ಬಡಜನತೆ ಹೆಚ್ಚಾಗಿ ಉಪಯೋಗಿಸುವ ರಾಗಿಹಿಟ್ಟಿನಲ್ಲೂ ಮರದಹೊಟ್ಟಿನ ಪುಡಿ ಬೆರೆಸಿದ್ದನ್ನು ಎತ್ತಿ ತೋರಿಸಿ ನಾಗರಿಕರ ಬವಣೆ ತಪ್ಪಿಸದಿದ್ದಲ್ಲಿ ಹೋರಾಟಕ್ಕಿಳಿಯಬೇಕಾದೀತೆಂದು ಎಚ್ಚರಿಸಿದ್ದಾರೆ.

ಆಜ್ರಿ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಆಜ್ರಿ ಗ್ರಾಮದಲ್ಲಿ 6-12-81ರಂದು ಡಿವೈಎಫ್ಐ ಘಟಕದ ಪ್ರಾರಂಭಮಾಡಲಾಯಿತು. ಮುಖ್ಯ ಅತಿಥಿಯಾಗಿ ಡಿವೈಎಫ್ಐ ತಾಲ್ಲೂಕು ಸಮಿತಿಯ ಉಪಾಧ್ಯಕ್ಷರಾದ ಕಾಂ. ವೆಂಕಟೇಶ ಕೋಣಿಯವರು ಮತ್ತು ಕಾರ್ಯದರ್ಶಿ ಮಹಾಬಲ ವಡೇರ ಹೋಬಳಿ ಆಗಮಿಸಿ ಡಿವೈಎಫ್ಐ ಕಾರ್ಯಕ್ರಮ, ಬೇಡಿಕೆ ಮತ್ತು ಗುರಿ ಇವುಗಳ ಕುರಿತು ಮಾತನಾಡಿದರು.

ಕೊನೆಯಲ್ಲಿ ಬಿ. ಶಂಕರ ಅಧ್ಯಕ್ಷರಾಗಿರುವ ಹೊಸ ಸಮಿತಿಯೊಂದನ್ನು ಚುನಾಯಿಸಲಾಯಿತು.

ಮಲೆನಾಡು ಪ್ರಾದೇಶಿಕ ಸಮಿತಿಯ ಸಮ್ಮೇಳನ

8-12-81ರಂದು ಚಿಕ್ಕಮಗಳೂರಿನ ಮಲ್ಲಂದೂರು ರಸ್ತೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಲೆನಾಡು ಪ್ರಾದೇಶಿಕ ಸಮಿತಿಯ ಪ್ರಥಮ ಸಮ್ಮೇಳನ ನಡೆಯಿತು. ಸಮ್ಮೇಳನವನ್ನು ರಾಜ್ಯಸಮಿತಿ ಸದಸ್ಯ ಕಾಂ. ಎಂ. ಎನ್. ಉಗ್ರಪ್ಪನವರು ಉದ್ಘಾಟಿಸಿದರು. ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಸೂರ್ಯನಾರಾಯಣರಾವ್ ಅವರು ಉಪಸ್ಥಿತರಿದ್ದರು.

ಆರಂಭದಲ್ಲಿ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನರ್ಪಿಸಿದ ನಂತರ ಕಲಾಪಗಳನ್ನು ನಿರ್ವಹಿಸಲು ಕಾಂ. ವಿ. ಸುಕುಮಾರ್ ಮತ್ತು ಕಾಂ. ಎ. ಕೆ. ವಿಶ್ವನಾಥರನ್ನೊಳಗೊಂಡ ಅಧ್ಯಕ್ಷ ಮಂಡಳಿಯನ್ನು ಚುನಾಯಿಸಲಾಯಿತು. ಸಮ್ಮೇಳನದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಿಂದ 30 ಪ್ರತಿನಿಧಿಗಳು ಪಾಲ್ಗೊಂಡಿದ್ದರು.


ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಪಕ್ಷದ ಚಟುವಟಿಕೆಗಳ ಕುರಿತಾದ ವರದಿಯನ್ನು ಸಲ್ಲಿಸಿದರು. ವರದಿಯನ್ನು ಕುರಿತು ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕನಿಷ್ಠ ವೇತನ ಕಾಯಿದೆಗೆ ಒಳಪಡದಂಥ ಕೈಗಾರಿಕೆಗಳನ್ನು ಕಾಯ್ದೆಯ ವ್ಯಾಪ್ತಿಗೆ ಒಳಪಡಿಸಬೇಕೆಂಬ, ಕನಿಷ್ಟ ಕೂಲಿ ನಿರ್ಧರಿಸಬೇಕೆಂಬ, ಗ್ರಾಮಾಂತರ ಪ್ರದೇಶಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ಕಾಂ. ಸಿ. ನಂಜುಂಡಪ್ಪ, ವಿ. ಸುಕುಮಾರ್, ಎ. ಸಿ. ಕೇಶವ್, ಗಂಗನಕೊಳಿಗೆ ಸುಕುಮಾರ್ ಮತ್ತು ಪಾಲ್ ಡಿಸೋಜಾರನ್ನೊಳಗೊಂಡ ಪ್ರಾದೇಶಿಕ ಸಮಿತಿಯನ್ನು ರಚಿಸಲಾಯಿತು. ಕಾಂ.ಸಿ.ಎನ್.ರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು.

ಪ್ರತಿನಿಧಿಗಳನ್ನುದ್ದೇಶಿಸಿ - ಕಾಂ. ಸೂರ್ಯನಾರಾಯಣರಾವ್ ಮಾತನಾಡಿದರು.

ರಾಜ್ಯ ಸಮ್ಮೇಳನದ ಕೆಲವು ದೃಶ್ಯಗಳು



ಸಮ್ಮೇಳನವನ್ನು ಉದ್ಘಾಟಿಸಿ ಕಾಂ. ಇ.ಎಂ.ಎಸ್. ಮಾತನಾಡುತ್ತಿರುವುದು



ಸಮ್ಮೇಳನದಲ್ಲಿ ಪ್ರತಿನಿಧಿಗಳು ಪಾಲ್ಗೊಂಡಿರುವ ದೃಶ್ಯ

ಪೋಲೆಂಡಿನಲ್ಲಿ ಗಂಭೀರ ಹೋರಾಟ

(1ನೇ ಪುಟದಿಂದ)

ಬಳಸಲು ಮಾಡಿಕೊಂಡರು. ತಮಗೆ ರಾಜಕೀಯ ಅಧಿಕಾರ ಕೊಡಬೇಕೆಂದೂ, ಸಮಾಜದ ಸಮಾಜವಾದಿ ವ್ಯವಸ್ಥೆಯನ್ನು ನಿಷೇಧಿಸಲು ತಮಗೆ ಅಧಿಕಾರ ಕೊಡಬೇಕೆಂದೂ ಅವರು ಬೇಡಿಕೆಯನ್ನಿಟ್ಟರು. ಬಹುಮತ ಗಣನೆಗಾಗಿ ಅವರು ಕೊಟ್ಟ ಕರೆ ಕ್ರಾಂತಿ ವಿರೋಧಿ ಶಕ್ತಿಗಳಿಗೆ ಕ್ರೋಢೀಕರಿಸುವ ಅವರ ತಂತ್ರವಲ್ಲದೆ ಬೇರೇನೂ ಅಲ್ಲ.

ಅದಕಾರಣ, ಸಾಮ್ರಾಜ್ಯಶಾಹಿಗಳು, ಅವರ ಪ್ರೆಸ್, ಸಾಮ್ರಾಜ್ಯಶಾಹಿಗಳ ಹಿತಸಾಧಕ ಟ್ರೇಡ್‌ಯೂನಿಯನ್ ಮುಂದಾಳುಗಳು, ಇವರೆಲ್ಲರೂ ಸೊಲಿಡೇರಿಟಿ ಮುಂದಾಳ 'ಲೆಖ್ ವಾಲೇಸಾ'ವನ್ನು ಪ್ರೋತ್ಸಾಹಿಸಿ, ಅವನೊಬ್ಬ ಮಾನವತಾ ಹಕ್ಕುಗಳಿಗಾಗಿ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡುವ 'ವೀರ'ನೆಂದು ತೋರಿಸಲು ಪ್ರಯತ್ನಿಸಿದುದರಲ್ಲಿ ಆಶ್ಚರ್ಯವೇನಿಲ್ಲ. ವಾಲೇಸನು ನಿಜವಾಗಿ ಬಂಡವಾಳಶಾಹಿ ಪದ್ಧತಿಯ ಸೇವಕನಷ್ಟೇ.

ಪ್ರತಿಕ್ರಾಂತಿಕಾರಿ ಬೆಂಬಲಿಗರಿಗೆ ಸಹಾಯಕವಾಗಿ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಪ್ರೋತ್ಸಾಹದಾಯಕವಾಗಿ ವರ್ತಿಸಲು ಪೋಪ್ ಮುಂದೆ ಬಂದದ್ದು ಆಕಸ್ಮಿಕವಲ್ಲ. ಪೋಲೆಂಡಿನಲ್ಲಿ ಕಾರ್ಮಿಕವರ್ಗದ ಕೆಲವು ವಿಭಾಗಗಳ ಅತೃಪ್ತಿಯನ್ನು ದುರುಪಯೋಗಗೊಳಿಸಿಕೊಂಡು ಸಮಾಜವಾದವನ್ನು ಬುಡಮೇಲು ಮಾಡಲು ಒಂದು ಅಂತರ್ರಾಷ್ಟ್ರೀಯ ಪಿತೂರಿಯನ್ನು ಇಲ್ಲಿ ನಾವು ಕಾಣಬಹುದು.

ಸಮಜಾಯಿಸುವಿಕೆ, ಸವಲತ್ತು ನೀಡಿಕೆ ಮತ್ತು ಒಪ್ಪಂದಗಳು ವಿಫಲವಾದಗ, ಸೊಲಿಡೇರಿಟಿಯು ದೇಶದಾದ್ಯಂತ ಸಂಪೂರ್ಣ ಮುಷ್ಕರಕ್ಕೆ ಕರೆಯನ್ನಿತ್ತಾಗ, ಆ ಪರಿಸ್ಥಿತಿಯನ್ನು ಎದುರಿಸಲು ಸಶಸ್ತ್ರದಳಗಳಿಗೆ ಈ ತೀವ್ರಕ್ರಮ ಕೈಗೊಳ್ಳಲು ಪಿ. ಯು. ಡಬ್ಲ್ಯು. ಪಿ. ಮತ್ತು ಸರಕಾರವು ಕೇಳಿಕೊಂಡಿತು. ಸರಕಾರದೊಡನೆ ಹಿಂಸಾತ್ಮಕವಾಗಿ ಎದುರಿಸುವ ಪ್ರತಿಕ್ರಾಂತಿಕಾರಿಗಳ ಕಾರ್ಯಕ್ರಮದ ಆರಂಭವಾಗಿತ್ತು ಈ ಮುಷ್ಕರ.

ಅದಕಾರಣ, ಸರಕಾರವು ಬೇಗನೇ ಕಾರ್ಯಕ್ಕಿಳಿಯಿತು. ತಾಳ್ಮೆಯಿಂದಲೂ ಸಮಜಾಯಿಸುವಿಕೆಯಿಂದಲೂ ಕೆಲವು ಫಲಿತಾಂಶಗಳನ್ನು ಪಡೆದುದರಿಂದ ಸರಕಾರಕ್ಕೆ ಈ ನಿರ್ಣಯಕ ಆಜ್ಞೆಯನ್ನಿಡಲು ಸಾಧ್ಯವಾಯಿತು. ಸೊಲಿಡೇರಿಟಿಯ ದೊಡ್ಡ ವಿಭಾಗಗಳು ಪ್ರತಿಗಾಮಿ ಮುಂದಾಳುಗಳ ಆಟವನ್ನು ಅರಿತು ಕ್ರಾಂತಿವಿರೋಧಿಗಳ ಲೈನನ್ನು ಸಕ್ರಿಯವಾಗಿ ವಿರೋಧಿಸಲಾರಂಭಿಸಿದರು. ಪಿ. ಯು. ಡಬ್ಲ್ಯು. ಪಿ. ಸದಸ್ಯರು-ಕಮ್ಯೂನಿಸ್ಟರು-ಸತತವಾಗಿ ಸೊಲಿಡೇರಿಟಿ ಲೈನಿನ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ನಡೆಸುತ್ತಾ ಬಂದು, ಸೊಲಿಡೇರಿಟಿಯ ಪ್ರತಿಗಾಮಿ ಆಕರ್ಷಣಾ ಶಕ್ತಿಯನ್ನು ಕಡಿಮೆಗೊಳಿಸುವುದರಲ್ಲಿ ಯಶಸ್ವಿಯಾದರು. ಸೊಲಿಡೇರಿಟಿ ಮುಂದಾಳುಗಳು ಮುಷ್ಕರದ ಬೆದರಿಕೆ ಹಾಕಿದರೂ, ಪೋಲೆಂಡಿನ ಜನತೆ, ಕಾರ್ಮಿಕವರ್ಗ ಮತ್ತು ಸರಕಾರವು ಪ್ರತಿಕ್ರಾಂತಿ ಶಕ್ತಿಗಳ ಆಕ್ರಮಣವನ್ನು ಎದುರಿಸುವುದಕ್ಕೆ ಉತ್ತಮ ಸ್ಥಾನದಲ್ಲಿವೆ.

ಪೋಲೆಂಡಿನ ಪರಿಸ್ಥಿತಿ ಗಂಭೀರ ಮತ್ತು ಅಪಾಯಕರ. ವಿದೇಶದಿಂದ ಬೆಂಬಲಪಡೆಯುತ್ತಿರುವ ಪ್ರತಿಕ್ರಾಂತಿಕಾರಿಗಳ ಸವಾಲಿನಲ್ಲಿ ಕಡಿಮೆ ಅಂದಾಜು ಮಾಡಬಾರದು. ಸಶಸ್ತ್ರದಳಗಳ ಸಹಾಯದಿಂದ ಪ್ರತಿಕ್ರಾಂತಿಯನ್ನು ಸೋಲಿಸಲು ಪಿ. ಯು. ಡಬ್ಲ್ಯು. ಪಿ. ಮತ್ತು ಪೋಲೆಂಡಿನ ಸರಕಾರವು ಸರಿಯಾದ ನಿರ್ಣಯವನ್ನು ಕೈಗೊಂಡಿದೆ. ಹಾಗೆ ಮಾಡದಿರುತ್ತಿದ್ದರೆ ಅದು ಗಂಭೀರ ತಪ್ಪಾಗುತ್ತಿತ್ತು. ಕಾರಣ, ಅಲ್ಲಿ ತಯಾರಾಗುತ್ತಿದ್ದುದು ಆಂತರಿಕ ಯುದ್ಧ.

ಸೊಲಿಡೇರಿಟಿಯು ಪ್ರಜಾಪ್ರಭುತ್ವಕ್ಕಾಗಲೀ, ಪ್ರಜಾಪ್ರಭುತ್ವ ಹಕ್ಕುಗಳಿಗಾಗಲೀ ಹೋರಾಡುತ್ತಿಲ್ಲ. ಅದು ಬಂಡವಾಳಶಾಹಿ ಪದ್ಧತಿಯ ಪುನರ್ ಸ್ಥಾಪನೆಗಾಗಿ, ಬಂಡವಾಳಶಾಹಿ ವರ್ಗದ ಮೇಲ್ಮೆಗಾಗಿ, ಪೋಲೆಂಡನ್ನು ಅಮೇರಿಕದ ವಸಾಹತಾಗಿ ಮಾಡಲು ಹವಣಿಸುವ ವರ್ಗದ ಅಧಿಕಾರ ಸ್ಥಾಪನೆಗಾಗಿ ನಡೆಸುವ ಹೋರಾಟವಾಗಿದೆ. ಸಶಸ್ತ್ರ ಶಕ್ತಿಗಳಾಗಲೀ, ಸರಕಾರವಾಗಲೀ ಶೋಷಕವರ್ಗಗಳ ಕಡೆಯಿಂದ ವರ್ತಿಸುತ್ತಿಲ್ಲ; ಅವರು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಆಕ್ರಮಿಸುತ್ತಿಲ್ಲ; ಬದಲು ದುಡಿಯುವ ಜನತೆಯ ಪ್ರಜಾಪ್ರಭುತ್ವವನ್ನು, ಶೋಷಣೆಯಿಂದ ಅವರ ಸ್ವಾತಂತ್ರ್ಯವನ್ನು ರಕ್ಷಿಸುತ್ತವೆ. ಸಮಾಜವಾದೀ ಪ್ರಭುತ್ವ ಮತ್ತು ಅದರ ಪರವಾಗಿ ವರ್ತಿಸುತ್ತಿರುವ ಸಶಸ್ತ್ರದಳಗಳು ಸತ್ಯ, ನ್ಯಾಯ, ಮತ್ತು ಪ್ರಜಾಪ್ರಭುತ್ವವನ್ನು ಪ್ರತಿನಿಧಿಸುತ್ತಿವೆ.

ಪೋಲೆಂಡಿನ ರಾಷ್ಟ್ರೀಯ ಮುಕ್ತಿ ಕೌನ್ಸಿಲಿಗೆ ಇಡೀ ಪ್ರಗತಿಪರ ಮಾನವತೆ ಮತ್ತು ಕಮ್ಯೂನಿಸಂ ಮತ್ತು ಸೋಷ್ಯಲಿಸಂ ಶಕ್ತಿಗಳು ಯಶಸ್ಸನ್ನು ಹಾರೈಸುತ್ತವೆ. ಪೋಲೆಂಡಿನಲ್ಲಿ ಪ್ರತಿಕ್ರಾಂತಿಯು ಹಿಮ್ಮೆಟ್ಟಿಸಲ್ಪಡುತ್ತದೆ, ಪೋಲೇಂಡಿನ ಜನತೆಯ ಮತ್ತು ಕಾರ್ಮಿಕ ವರ್ಗದ ಐಕ್ಯತೆಯು ಬಲಗೊಳ್ಳಲ್ಪಡುತ್ತದೆ ಮತ್ತು ಸಮೃದ್ಧ ಸಮಾಜವಾದಿ ಪೋಲೇಂಡನ್ನು ರಚಿಸುವ ಕರ್ತವ್ಯವನ್ನು ದ್ವಿಗುಣಶಕ್ತಿಯಿಂದ ಕೈಗೊಳ್ಳಲು ದೇಶವು ಮುನ್ನಡೆಯುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ.

ಪೋಲೇಂಡಿನಲ್ಲಿ ಸಮಾಜವಾದೀ ಪದ್ಧತಿಯನ್ನು ರಕ್ಷಿಸುವವರ ವಿರುದ್ಧ ಸಾಮ್ರಾಜ್ಯಶಾಹಿ ಪಿತೂರಿಗಾರರು ಮತ್ತು ಸುಳ್ಳು ವದಂತಿಗಾರರು ದ್ವೇಷವನ್ನು ಕಾರುತ್ತಿದ್ದಾರೆ. ಬಂಡವಾಳಶಾಹಿ ಪುರಸ್ಕರಣವಾದಿ ಹೊಗಳುಭಟ್ಟರು ಈ ಹೋರಾಟಗಾರರನ್ನು ತೆಗಳಿ ಸೊಲಿಡೇರಿಟಿಗೆ ಬೆಂಬಲವೀಯುತ್ತಿದ್ದಾರೆ. ಬಿ. ಜೆ. ಪಿ. ಯಂಥಹ ಕೆಲವು ಪ್ರತಿಗಾಮೀ ಪಕ್ಷಗಳ ಮುಂದಾಳುಗಳು ಪೋಲೀಶ್ ಸರಕಾರವನ್ನು ತೆಗಳಲಿಕ್ಕೆ ಹಿಂತೆಗೆಯುವುದಿಲ್ಲ. ಆದರೆ ಸಮಾಜವಾದಕ್ಕಾಗಿ ಹೋರಾಡುತ್ತಿರುವ ಭಾರತದ ಕಾರ್ಮಿಕ ವರ್ಗ ಮತ್ತು ಜನತೆ ಸಮಾಜವಾದವನ್ನು ರಕ್ಷಿಸುವ ಕಾರ್ಮಿಕವರ್ಗ ಹೋರಾಟ ನಡೆಸುತ್ತಿರುವ ಪೋಲೇಂಡಿನ ಪಿ. ಯು. ಡಬ್ಲ್ಯು. ಪಿ. ಮತ್ತು ಜನತೆಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

ಸಂಪಾದಕೀಯ

(1ನೇ ಪುಟದಿಂದ)

ನಮ್ಮ ಪಕ್ಷದ ವಕ್ತಾರರು ಹೇಳಿರುತ್ತಾರೆ. ಅನವಶ್ಯಕವಾದ ವಿದೇಶೀ ಆಮದನ್ನು ಕಡಿತ ಮಾಡುವುದರಿಂದಲೂ, ಇಲ್ಲಿ ಗುತ್ತೇದಾರರ ಮೇಲಿನ ತೆರಿಗೆ ಹೆಚ್ಚಿಸುವುದರಿಂದಲೂ ಈ ಹಣವನ್ನು ನಾವು ಪಡೆಯಲು ಸಾಧ್ಯವಿರುವಾಗ ಈ ಭಿಕ್ಷಾಟನೆ ಯಾಕೆ?

ಸರಕಾರದ ಈ ದಿವಾಳಿಕೋರ ನೀತಿಯನ್ನು ಪ್ರತಿಭಟಿಸಿ ರಾಷ್ಟ್ರಾದ್ಯಂತ ಸಾರ್ವತ್ರಿಕ ಚಳುವಳಿ ನಡೆಯಬೇಕಾಗಿದೆ. ದೇಶದ ಗೌರವ, ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವವನ್ನು ರಕ್ಷಿಸಲು ಎಲ್ಲ ದೇಶಭಕ್ತರೂ ಮುಂದಾಗಲಿ. ಈ ಪವಿತ್ರ ಹೋರಾಟದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮುಂಚೂಣಿಯಲ್ಲಿರುತ್ತದೆ. ಈ ಹೋರಾಟ ಯಶಸ್ವಿಯಾಗಲಿ.

○

ವಿರೋಧಿ ಪಕ್ಷಗಳ ಬೆಂಬಲ

(1ನೇ ಪುಟದಿಂದ)

ಮುಖರ್ಜಿ (ಸಿ. ಪಿ. ಐ.-ಎಂ), ಇಂದ್ರಜಿತ್‌ಗುಪ್ತಾ (ಸಿ. ಪಿ. ಐ.), ಮಧು ದಂಡವತೆ (ಜನತಾ) ಅಟಲ್‌ಬಿಹಾರಿ ವಾಜಪೇಯಿ (ಬಿ. ಜೆ. ಪಿ.), ಚಂದ್ರಜಿತ್ ಯಾದವ್ (ಜನವಾದಿ), ರಾಮ್ ವಿಲಾಸ್ ಪಾಸ್ವಾನ್ (ಲೋಕದಳ) ಮತ್ತು:

ರಾಜ್ಯಸಭೆಯ ಎನ್. ಪಿ. ಸಾಹಿ (ಲೋಕದಳ), ಭೋಲಾಪಾಸ್ವಾನ ಶಾಸ್ತ್ರಿ (ಕಾಂಗ್ರೆಸ್-ಎಸ್), ಎಲ್. ಕೆ. ಅಡ್ವಾನಿ (ಬಿ ಜೆ. ಪಿ.), ಹರಿಕಿಶನ್ ಸಿಂಗ್ ಸುರ್‌ಜೀತ (ಸಿ.ಪಿ.ಐ.-ಎಂ), ಪಿಲೂ ಮೋದಿ (ಜನತಾ), ಬಿ. ಡಿ. ಖೋಬರ್‌ಗಡೆ (ಆರ್. ಪಿ. ಐ.), ವೈ. ಶರ್ಮಾ (ಸಿ ಪಿ. ಐ.), ಮುಖಿನ್ ಪಾಲ್ (ಆರ್. ಎಸ್. ಪಿ.), ಅಮರ್ ಚಕ್ರವರ್ತಿ (ಎಫ್. ಬಿ.) ಇವರುಗಳು ಅಂಕಿತಹಾಕಿದ್ದಾರೆ.

ವಿದ್ಯಾರ್ಥಿ ಯುವಜನತೆಯ ಬೆಂಬಲ

ಡಿಸೆಂಬರ್ 13ರಂದು ನವದೆಹಲಿಯಲ್ಲಿ 13 ವಿದ್ಯಾರ್ಥಿ-ಯುವಜನ ಸಂಘಟನೆಯ ಮುಖಂಡರುಗಳು ಸಭೆ ಸೇರಿ ಜನವರಿ 19ರಂದು ನಡೆಯಲಿರುವ ಅಖಿಲಭಾರತ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿದ್ದಾರೆ. ದೇಶದ ಯುವಜನತೆ ಕಾರ್ಮಿಕ ಬಾಂಧವರೊಂದಿಗೆ ಭುಜಕ್ಕೆ ಭುಜ ಕೊಟ್ಟು ಸಹಕರಿಸಬೇಕೆಂದು ಕರೆ ನೀಡಿದ್ದಾರಲ್ಲದೇ ಈ ಕುರಿತು ಪತ್ರಿಕಾ ಹೇಳಿಕೆಯೊಂದನ್ನು ನೀಡಿದ್ದಾರೆ. ಜನವರಿ 19ರಂದು ದೇಶದ ಸಮಸ್ತ ವಿದ್ಯಾರ್ಥಿವೃಂದ ತರಗತಿಗಳನ್ನು ಬಹಿಷ್ಕರಿಸಿ ಮುಷ್ಕರಕ್ಕೆ ಸಹಕರಿಸಬೇಕೆಂದೂ ವಿನಂತಿಸಿದ್ದಾರೆ.

●

ಗಮನಿಸಿ

ರಾಜ್ಯ ಸಮ್ಮೇಳನದಲ್ಲಿ ಕೈಕೊಳ್ಳಲಾದ ನಿರ್ಣಯಗಳನ್ನು ಈ ವಾರ ಸ್ಥಳಾಭಾವದಿಂದ ಪ್ರಕಟಿಸಲಾಗಿಲ್ಲ.

ಕಳೆದವಾರ(20-12-81)ದ ಪತ್ರಿಕೆಯ ಕೊನೆಯ ಪುಟದ 2ನೇ ಕಾಲಂನ 4ನೇ ಪ್ಯಾರಾದಲ್ಲಿ ಕಾಂ. ಎಂ. ಕೆ. ಭಟ್‌ರ ಹೆಸರು ಕೈಬಿಟ್ಟುಹೋಗಿದೆ. ವಿಜಯವಾಡಾ ಸಮ್ಮೇಳನಕ್ಕೆ ಚುನಾಯಿತರಾದ ಪ್ರತಿನಿಧಿಗಳಲ್ಲಿ ಕಾಂ. ಎಂ. ಕೆ. ಯವರು ಸೇರಿದ್ದಾರೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT